Reg. No. M. 1550

KODAGU

21—2—1936

IF NOT
delivered
ase return to
KODAGU"
OFFICE,
ERCARA.

ಕೊಡಗು

ಅಚ್ಚುಮೆಚ್ಚಿನ
ಮುದ್ರಣ ಕಲಸಕ್ಕೆ
"ಕೊಡಗು"
ಪ್ರೆಸ್ಸು.
ಮಡಿಕೇರಿ.

ಹೆಚ್ಚಿನ ವಿಷಯಕ್ಕೆ
ಕೂಡಲೆ ವಿಚಾರಿಸಿರಿ.

ಸಕ್ಕೇಸ ಭೂತದಯ್ಯೆಯಾ ವಿದ್ಯಾ ವೀತಿ ಪ್ರಯುಕ್ಷಾ॥ ಖಳ್ಳಮುಕ್ಕೇಸ ಪೇಕಾಖಾಂ ಸುಖಿ ರಾ ರಾಜ್ಯ ಸಂಪದಾ

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವದು.

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಸಂದ್ಯಂಡ ಐ. ಬೆಳ್ಯಪ್ಪ.

ಸಂಪುಟ ೧೫] ಮಡಿಕೇರಿ, ಸನ್ ೧೯೩೬ನೇ ಇಸವಿ ಫೆಬ್ರವರಿ ತಾರೀಕು ೨೧ನೇ ಶುಕ್ರವಾರ. [ಸಂಚಿಕೆ ೩೫

Telephon ;
3145

By Appointment
To H. E. The Governor of Madras.

Telegrams:
'PRECIOUS.'


Brooch


Necklace.

Ring.

Ring.

V. SUBRAMANIA IYER.
Jeweller, & Diamond Merchant,
2—13 2 & 3 Kuppumuthu Street Tiruvateswaranpet. POST BOX 423 TRIPLICANE. P. O., MADRAS.
Catalogue & special designs with quotations (free) on enqu ry

1906ರಲ್ಲಿ ಸ್ಥಾಪಿತವಾದದ್ದು.

ದಿ ಕೆನರಾ ಬ್ಯಾಂಕಿಂಗ್ ಕೊರ್ಪರೇಷನ್ ಉಡುಪಿ—ಲಿಮಿಟೆಡ್.
(ಬ್ರಿಟಿಷ್ ಇಂಡಿಯದಲ್ಲಿ ರಿಜಿಸ್ಟರ್ ಆದದ್ದು.)

ಹೆಡ್ ಆಫೀಸು—ಉಡುಪಿ
ಶಾಖೆಗಳು.
ಉಡುಪಿ
ಕುಂದಾಪುರ
ಮಂಗಳೂರು—ರಥಬೀದಿ
ಮಂಗಳೂರು—ಬಂದರ್
ಮದರಾಸು
ಶಿವಮೊಗ್ಗಾ
ಮಡಿಕೇರಿ
ವೀರರಾಜೇಂದ್ರಪೇಟೆ
ಬೇಂಕರರು.
ಬೊಂಬಾಯಿ
ಕಲ್ಕತ್ತಾ
ಕರಾಚಿ
ಕೊಚ್ಚಿನ್
ಮೈಸೂರು
ಬೆಂಗಳೂರು ಇತ್ಯಾದಿ ಸ್ಥಳಗಳಲ್ಲಿ

ನಿಮ್ಮ ಸೇವೆಯೇ ನಮ್ಮ ಧ್ಯೇಯ.

ತಾ. 15—1—1936 ರಿಂದ ಚಿನ್ನಾಭರಣಗಳ ಮೇಲಣ ಸಾಲಗಳ ಬಡ್ಡಿಯ ದರವನ್ನು ಅತೀ ಕಡಿಮೆ ದರಕ್ಕೆ ಇಳಿಸಲಾಗಿದೆ.

ನಿಂಬು ಠೇವಣಾತಿಗಳನ್ನು ಶೇಕಡ 5ರ ವರೆಗಿನ ಬಡ್ಡಿಯಲ್ಲಿ ಈಗ ಸ್ವೀಕರಿಸಲಾಗುತ್ತದೆ.

ಚಾಲ್ತಿ, ಸೇವಿಂಗ್ಸ್‌ಬ್ಯಾಂಕ್, ಕ್ಯುಮಿಲೇಟಿವ್ ಠೇವಣಾತಿಗಳನ್ನು ಅತೀ ಆಕರ್ಷಣೀಯವಾದ ಬಡ್ಡಿಯಲ್ಲಿ ತೆರೆಯೋಣಾಗುತ್ತವೆ.

ಅಲ್ಲದೆ

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟುಗಳು ನಡಿಸಲ್ಪಡುತ್ತವೆ.

ಹೆಚ್ಚಿನ ಮಾಹಿತಿ ನಮ್ಮ ಯಾವುದೇ ಆಫೀಸಿನಿಂದ ಪಡೆಯಬಹುದು.

52—14

ಜನರಲ್
ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್.
(ಸ್ಥಾಪಿತವಾದದ್ದು 1907 ರಲ್ಲಿ)

ಜೀವವಿಮೆಯಲ್ಲಿನ ಅತ್ಯುತ್ತಮ ಸೌಲಭ್ಯಗಳನ್ನೆಲ್ಲ ಕೊಡುತ್ತದೆ.

ಬೋನಸ್ಸು ಅತೀ ಹೆಚ್ಚು.

ಜೀವಾವಧಿ ಪಾಲಿಸಿಗಳ ಮೇಲೆ ವರ್ಷಕ್ಕೆ ರೂ. 25%೦
ಎಂಡೋಮೆಂಟ್ ಪಾಲಿಸಿಗಳ ಮೇಲೆ ವರ್ಷಕ್ಕೆ ,, 20%೦
ಪಾಲಿಸಿಯ ಶರತ್ತುಗಳು ಅತೀ ಸುಲಭ
ಎಷ್ಯೂರೆನ್ಸ್ ಯೋಜನೆಗಳು ಎಲ್ಲರಿಗೂ ಹಿತಕರವಾಗಿದೆ.
ಏಜೆನ್ಸಿ ನಿಯಮಗಳು ಅತೀ ಲಾಭದಾಯಕವಿದ್ದು ವಂಶವಾರಂಪರ್ಯ ಕಮಿಶನ್ ದೊರೆಯುವಂತಿದೆ.
ಹೆಚ್ಚಿನ ವಿವರಗಳಿಗೆ ಕೂಡಲೇ ಬರೆಯಿರಿ.

ಸಿ. ಡಿ. ಭಾರ್ಗವ, ಎಫ್. ಎಸ್. ಎಸ್. (ಲಂಡನ್),
ಜನರಲ್ ಮೇನೇಜರ್, ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ ಲಿಮಿಟೆಡ್, ಅಜ್ಮೀರ್. ಅಥವಾ:—
ಎ. ಎನ್ ಎಸ್ ಅಯ್ಯಂಗಾರ್.
ಸುಪರಿಂಟೆಂಡೆಂಟ್, ಜನರಲ್ ಅಷ್ಯೂರೆನ್ಸ್, ಬಿಲ್ಡಿಂಗ್
ಚಾಮರಾಜಪೇಟೆ, 3ನೇ ರೋಡು,
52—37 ಬೆಂಗಳೂರು

ಕೋಳಿಗಳ ವ್ಯವಸಾಯ.

(ಮೆ ಎ. ಯಂ. ಮುತ್ತಪ್ಪ, ವೆಟರಿನೆರಿ ಸರ್ಜನ್, ಪೊನ್ನಂಪೇಟೆ.)

ಪಾಶ್ಚಾತ್ಯ ದೇಶಗಳಲ್ಲಿ ಈ ಕಸಬು ಅನೇಕರನ್ನು ಲಕ್ಷಪತಿಗಳನ್ನಾಗಿ ಮಾಡಿದೆಯೆಂಡರೆ ನಾವೆಲ್ಲರೂ ವಿಸ್ಮಯ ಪಡುವೆವು. ಆದರೆ ನಾವು, ಇಡೀ ಹಿಂದೂಸ್ಥಾನ ನಿವಾಸಿಗಳು, ಕೋಳಿ ಸಾಕುವುದರಿಂದ ಪಡೆಯಬಹುದಾದ ಉತ್ಪತ್ತಿಯನ್ನೂ, ಪ್ರಯೋಜನವನ್ನೂ ಇನ್ನೂ ಗಣನೆಗೆ ತಂದಿರುವುದಿಲ್ಲ. ಈ ವೃತ್ತಿಯನ್ನು ಕೈಕೊಂಡಿದ್ದೇ ಆದರೆ ಈಗ ಯಾವ ಪ್ರಯೋಜನಕ್ಕೂ ಉಪಯೋಗಿಸಿದ, ಹಾಗೂ ಖಂಜರಾಗಿರುವ ಪ್ರದೇಶಗಳನ್ನು, ಕೋಳಿಗಳ ಪೋಷಣಾಲಯಗಳನ್ನಾಗಿ ಮಾಡಿಕೊಂಡು, ಇತರ ಫಲವತ್ತಾದ ಪ್ರದೇಶಗಳಿಂದ ಪಡೆಯಬಹುದಾದ ಲಾಭವನ್ನು ಹೊಂದಬಹುದು ಕೆರೆ, ತೊಲ್ಲಿ, ಬೆಗು ಸ್ಥಳಗಳನ್ನೂ ಸಹ ಬಾತು ಸಾಕಲು ಉಪಯೋಗಿಸಿ ಲಾಭವನ್ನು ಪಡೆಯಬಹುದು. ಚೀನಾ, ಇಜಿಪ್ಟ್, ದಕ್ಷಿಣ ಆಫ್ರಿಕ, ಆಸ್ಟ್ರೇಲಿಯಾ ಮೊದಲಾದ ನಮ್ಮ ದೇಶದ ಹವಗುಣವುಳ್ಳ ರಾಷ್ಟ್ರದವರು ಈ ಕೋಳಿ ಸಾಕುವುದನ್ನು ತಮ್ಮ ಜೀವನೋಪಾಯದ ಒಂದು ವೃತ್ತಿಯನ್ನಾಗಿ ಕೈಕೊಂಡಿರುವರು. ಆದರೆ ಆ ವಿಚಾರದಲ್ಲಿ ನಾವು ಭಾರತೀಯರು, ಅದರಲ್ಲೂ ನಮ್ಮ ಈ ಕೊಡಗು ದೇಶದ ನಿವಾಸಿಗಳು, ಇನ್ನೂ ನಿದ್ರೆಯಲ್ಲೇ ಇರುವೆವು.

ಈ ವೃತ್ತಿಯು ಕೊಡಗಿನಲ್ಲಿ ಎಲ್ಲಾದರೂ ಇದ್ದ ಪಕ್ಷ ಅದು ಇತ್ತೀಚೆಗೆ ಹೊಂಗಿನಿಂದ ಬಂದು ನೆಲಸಿದ ಕೆಲವು ಏರೋಪ್ಯರ ವಸತಿಗಳಲ್ಲಿ ಮಾತ್ರ. ಇವರು ಸಾಕುವ ಈ ಉತ್ತಮ ತರದ ಕೋಳಿಗಳನ್ನು ನೋಡಿ, ಕೆಲವರು ತಾವೂ ಸಹ ಆ ಜಾತಿಯ ಕೋಳಿಗಳನ್ನು ಸಾಕುವ ಅಭಿಲಾಷೆಯಲ್ಲಿ ಈಗೀಗ ಈ ದೇಶದ ಕೆಲವು ಮಹನೀಯರು ತಮ್ಮ ಸಂಣ ಜಾತಿಯ ಕೋಳಿಗಳಂದ ಆ ರೀತಿಯ ಉತ್ತಮ ಜಾತಿಯವುಗಳನ್ನು ಪಡೆಯಬಹುದಾದ ಹುಂಜಿಕೆಗಳನ್ನು ಕಂಡು ಹಿಡಿಯುವ ಪ್ರಯತ್ನದಲ್ಲಿರುವರು. ಆದರೆ ಡಿ. ಬಿ. ಯವರಾಗಲೀ, ಸರಕಾರದವರಾಗಲೀ ಈ ಕಸಬನ್ನು ಊರ್ಜಿತಗೊಳಿಸುವ ವಿಚಾರದಲ್ಲಿ ಯಾವುದೊಂದು ತರಹದ ಸಹಾಯ ಕೊಡದಿರುವುದು ವ್ಯಸನಕರವಾಗಿದೆ ಇಂಥಾ ಕೋಳಿ ಪ್ರದರ್ಶನವು ಅಲ್ಪಸ್ವಲ್ಪ ಪ್ರಯೋಜನಕಾರಿಯಾಗಬಹುದು. ಇದು ಜನರಲ್ಲಿ ತಾವೂ ಸಹ ಆ ಜಾತಿಯ ಉತ್ತಮ ಕೋಳಿಗಳನ್ನು ಸಾಕಿ, ಆ ಮೂಲಕ ಪ್ರಯೋಜನವನ್ನು ಹೊಂದುವ ಶ್ರಮವನ್ನು ವಹಿಸಲು ಉತ್ತೇಜನ ಕೊಡುವುದು ಆದರೆ ಕೋಳಿಗಳ ಒಂದು ವ್ಯವಸಾಯ ಕ್ಷೇತ್ರ (Poultry forms) ವನ್ನು ಏರ್ಪಡಿಸುವುದು ಬಹು ಅಗತ್ಯ. ಅಲ್ಲಿ ಆಯಾ ಜಾತಿಯ ಕೋಳಿಗಳನ್ನು ಸಾಕುವ ಕ್ರಮ, ಸಂಣ ಜಾತಿಯ ದೇಶೀಯ ಕೋಳಿಗಳನ್ನು ಅಭಿವೃದ್ಧಿಗೊಳಿಸುವ ರೀತಿ, ಆಯಾ ಜಾತಿಯ ಕೋಳಿಗಳಿಗಿರುವ ಮೊಟ್ಟೆ ಇಕ್ಕುವ ಶಕ್ತಿ, ಅದರಿಂದ ಜನ ಸಾಮಾನ್ಯರಿಗೆ ದೊರೆಯಬಹುದಾದ ಲಾಭ ಇತ್ಯಾದಿ ವಿಚಾರಗಳನ್ನು ನಮ್ಮ ದೇಶಿಯರಲ್ಲಿ ನಾಟುವಂತೆ ಮಾಡಬೇಕು ಆದುದರಿಂದ ಇನ್ನಾದರೂ ಈ ದೇಶದ ಅನುಕೂಲತೆ ಇರುವಲ್ಲಿ ವ್ಯವಸಾಯ ಕ್ಷೇತ್ರಗಳನ್ನು ಸ್ಥಾಪಿಸಿ, ಅಲ್ಲಲ್ಲಿ ಪ್ರದರ್ಶನಗಳನ್ನು ಏರ್ಪಡಿಸಿ, ಆ ಮೂಲಕ ಇಲ್ಲಿನ ಪ್ರಜೆಗಳಲ್ಲಿ ಇದರ ಪ್ರಯೋಜನವನ್ನು ಮನಗಾಣುವಂತೆ ಮಾಡಿ, ಆ ಕಸಬಿಗೆ ಉತ್ತೇಜನ ಕೊಡುವಂತೆ ಮಾಡಬೇಕಾಗಿ ಎಲ್ಲರಲ್ಲಿಯೂ ಪ್ರಾರ್ಥನೆ

1919 ನೆಯ ಇಸವಿಯಲ್ಲಿ ಸಂಯುಕ್ತ ಪ್ರಾಂತ್ಯದ ಲಕ್ನೋ ನಗರದಲ್ಲಿ ಆ ಸರಕಾರವು ಸ್ಥಾಪಿಸಿದ ಕೋಳಿಗಳ ವ್ಯವಸಾಯ ಕ್ಷೇತ್ರವು ದೇಶೀಯ ಚಿಕ್ಕ ಜಾತಿಯ ಕೋಳಿಗಳನ್ನೂ ಸಹ, ಅವುಗಳ ಗಾತ್ರದಲ್ಲಿಯೂ, ಮೊಟ್ಟೆ ಇಕ್ಕುವ ಶಕ್ತಿಯಲ್ಲಿಯೂ, ಮೊಟ್ಟೆಯ ಗುಣದಲ್ಲಿಯೂ, ಉತ್ತಮಗೊಳಿಸಬಹುದೆಂಬ ಸಂಗತಿಯನ್ನು ಸಾಧಿಸಿರುವುದು. ಅಲ್ಲಿ 1922 ನೆಯ ಇಸವಿಯಲ್ಲಿ ಒಂದು ದೇಶೀಯ ಹೇಟೆಯು ಲೆಗ್ ಹಾರ್ನ್ ಎಂಬ ವಿದೇಶೀಯ ಹುಂಜದ ಸಂಪರ್ಕದಿಂದ 66 ದಿನಗಳಲ್ಲಿ 61 ಮೊಟ್ಟೆಗಳನ್ನು ಇಟ್ಟಿರುವುದು ಆ ಕಾರಣ, ಆ ವಿಚಾರದಲ್ಲಿ ಅತ್ಯಂತ ಉಪಯುಕ್ತವಾದ ಹುಂಜವೆಂದರೆ ಲೆಗ್ ಹಾರ್ನ್, ಶೀತ ಪ್ರದೇಶಗಳಲ್ಲಿ ರೋಡ್ ಐಲೇಂಡ್ ರೆಡ್ಸ್, ಲೈಟ್ ಸಸ್ಸೆಕ್ಸ್, ಇಲ್ಲವೇ ಬಫ್ ಆರ್ಪಿಂಗ್ಟನ್ ಈ ಜಾತಿಯ ಹುಂಜಗಳಿಂದ ಉತ್ತಮ ಫಲವನ್ನು ಪಡೆಯಬಹುದು. ಒಟ್ಟಾರೆ ಹೇಳುವುದಾದರೆ ಅನುಕೂಲ ಇರುವವರೆಲ್ಲರೂ ಈ ಕಸಬನ್ನು ಕೈಕೊಂಡು, ಅದನ್ನು ಉತ್ತಮ ರೀತಿಯಿಂದ ನಡೆಸಿಕೊಂಡು ಬಂದುದೇ ಆದರೆ, ಒಳ್ಳೆಯ ಫಲವನ್ನು ಪಡೆಯಬಹುದು.

ಇನ್ನು ಅವುಗಳಿಗೆ ಒದಗಬಹುದಾದ ರೋಗಗಳ ವಿಚಾರ. ಇತ್ತೀಚೆಗೆ ಅವುಗಳ ಪರಿಹಾರೋಪಾಯಗಳನ್ನು ಕಂಡು ಹಿಡಿಯುವ ಶ್ರಮವನ್ನು ಅನೇಕರು ವಹಿಸಿರುವರು. ಈಗಾಗಲೇ ಮುಕ್ತೇಶ್ವರದ (ರಿಸರ್ಚ್ ಇನ್‌ಸ್ಟಿಟ್ಯೂಟ್) ಪಶು ಸಂಶೋಧನಾಲಯದ ಪಶು ವೈದ್ಯ ಪರಿಶೋಧಕರು ಅನೇಕ ನಿವಾರಣೋಪಾಯಗಳನ್ನು ಕಂಡುಹಿಡಿದಿರುವರು ಹೇಶೀಯ ಪಶುವೈದ್ಯ ಇಲಾಖೆಯವರು ಸಹ ಮುಕ್ತೇಶ್ವರದ ಪರಿಶೋಧಕರ ಸಹಾಯದಿಂದ ಅಂಟಿರುವ ಜಾಡ್ಯವನ್ನು ಪರಿಹರಿಸುವುದಲ್ಲದೆ ಇನ್ನು ಮುಂದೆ ಯಾವ ತರಹದ ಅಂಟುರೋಗವು ಬಾರದಂತೆ ಹುಷಾರಿಕೆಗಳನ್ನು ಕಂಡುಹಿಡಿಯುವುದರಲ್ಲಿ ಕ್ರಮ ಶ್ರಮವನ್ನು ತೆಗೆದುಕೊಳ್ಳುತ್ತಿರುವರು.

ಮೊಟ್ಟೆಯ ವಿಚಾರ ಅವಶ್ಯವಾಗಿ ಎಚ್ಚರವಿಡಬೇಕಾದ ಕೆಲವು ಅಂಶಗಳು

1. ಕೆಲವು ವೇಳೆ ಕೆಲವು ಕೋಳಿಗಳು ವಿಕಾರವಾದ ಮೊಟ್ಟೆಗಳನ್ನಿಡುವುವು. (ಬಾವೊಟ್ಟೆ) ಇದಕ್ಕೆ ಅದರಲ್ಲಿರುವ ಅತಿಯೂದ ಕೊಬ್ಬೇ ಕಾರಣ ಇಂತಹ ಸಂದರ್ಭದಲ್ಲಿ ಮೊಳಕೆಯ ಭಕ್ಕಿಗೊಳಗಾಗಿ ಅದು ಅನಿಷ್ಟವೆಂದು ಭಾವಿಸಿ, ಕೊಲ್ಲುವುದಂತಾಗಲು, ಆಹಾರವನ್ನು ಕಡಿಮೆ ಮಾಡಿ ಕೊಡುವುದು ಉತ್ತಮ

2. ಮೊಟ್ಟೆಯ ಓಡಿನಲ್ಲಿ 'ಸುಂಣ ಲೈನ್' ಸಾಲ್ಪ್ಸ್' ಕಡಮೆಯಾದರೆ ಎಂದುವಾಗುವುದು (ತೋಮು ಬ್ಯೆ.)

3 ಮರಿ ಮಾಡಲು ಅತಿ ಉತ್ತಮವಾದ ಮೊಟ್ಟೆಯು ಅವಶ್ಯ. ಏಳು ದಿನಗಳೊಳಗಿನ ಮೊಟ್ಟೆಗಳು ಕಾವು ಕೊಟ್ಟು ಮರಿ ಮಾಡಲು ಬಹು ಪ್ರಯೋಜನಕಾರಿ.

4, ಒಳ್ಳೆ ಮೊಟ್ಟೆಗಳನ್ನು ಬಹು ಸುಲಭದಲ್ಲಿ ಕಂಡುಕೊಳ್ಳಬಹುದು, ಒಂದು ಅಡಿ ಚಪ್ಪಟೆಯಾದ ಪಾತ್ರೆಯ ಅರ್ಧದಷ್ಟು ಸ್ವಲ್ಪ ಉಪ್ಪು ಮಿಶ್ರ ಮಾಡಿದ ನೀರನ್ನು ಹಾಕಿ, ಅದರಲ್ಲಿ ಮೊಟ್ಟೆಗಳನ್ನು ಹಾಕಿದರೆ, ಉತ್ತಮವಾದವುಗಳು ತಳದಲ್ಲಿ ಅಡ್ಡವಾಗಿ ನಿಲ್ಲುವುವು, ಹಾಳಾದವುಗಳು ತೇಲುತ್ತಿರುವುವು,

5, ಕೆಲವು ವೇಳೆ ಉತ್ತಮ ಮರಿಗಳು ಮೊಟ್ಟೆಗಳೊಳಗೆ ಸತ್ತಿರುವುದನ್ನು ಕಾಣಬಹುದು, ಅದಕ್ಕೆ ಓಡು ಮಂದವಾಗಿರುವುದೇ ಕಾರಣ, ಇಂತಹ ಮೊಟ್ಟೆಗಳನ್ನು 19 ನೆಯ, 20 ನೆಯ, ಮತ್ತು 21 ನೆಯ ದಿನಗಳಲ್ಲಿ ಒಂದೊಂದು ಮಿನಿಟಿನ ಕಾಲ ಉಗುರು ಬಿಸಿ ನೀರಿನಲ್ಲಿಡುವುದು ಉತ್ತಮ, ಬಟ್ಟೆಯನ್ನು ಬಿಸಿನೀರಿಗದ್ದಿ, ಅದರಿಂದ ಮೊಟ್ಟೆಯನ್ನು ಉಜ್ಜುವುದು ಶ್ರೇಷ್ಠವಾದ ಉಪಾಯ,

6, ವಾಡಿಕೆಯಂತೆ ಮೊಟ್ಟೆಯಿಡದು ಪೃಥನು ಹೊರಬರುವುದು ಹುಂಜಮರಿಗಳು,

ಮರಿಗಳ ವಿಚಾರ ಎಚ್ಚರವಿಡಬೇಕಾದ ವಿಷಯ.

1, ಮೊಟ್ಟೆಯೊಡೆದ ಅನಂತರ 24 ಇಲ್ಲವೇ 36 ಘಂಟೆಗಳ ಕಾಲ ಮರಿಗಳಿಗೆ ಯಾವ ಆಹಾರವನ್ನೂ ಕೊಡುವ ಅವಶ್ಯಕತೆಯಿಲ್ಲ, ಕೊಡಲೂ ಬಾರದು,

2, ಮರಿಗಳಿಗೆ 6 ವಾರಗಳ ವರೆಗೆ ಸಾಧ್ಯವಾದರೆ ಕೆಸರಿಗೆದ ಹಾಲನ್ನು ಇಲ್ಲವೇ ಮಜ್ಜಿಗೆಯನ್ನು ಕುಡಿಯಲಿಕ್ಕೆ ಕೊಡುವುದು,

3, ಮರಿಗಳು ಆಗಾಗ್ಗೆ ಜಾಯು ಬಿಡುತ್ತಿದ್ದರೆ ಒಂದು ರಿಯನ್ನು ಟರ್ಪೆಂಟೈನ್‌ನಲ್ಲಿಗೆ ಅದ್ದಿ, ಅದನ್ನು ಶಕ್ತಿಸನಕ್ಕೆ ಹಾಕಿ, ಉಜ್ಜಿ ತೆಗೆದರೆ ಕ್ರಿಮಿಗಳು ನಾಶವಾಗಿ ಬಾಯಿ ಬಿಡುವುದನ್ನು ನಿಲ್ಲಿಸುವುವು, (gapes)

4, ಲಿಂಗಭೇದವನ್ನು ಗುರುತಿಸುವ ಸಮಯ ಒಂದು ಹುಂಜ ಹೇಟೆಗಳನ್ನು ಬೇರ್ಪಡಿಸಬೇಕು, ಹುಂಜಗಳನ್ನು ತೆಗೆಸುವುದು ಒಳ್ಳೆಯದು, ಹಾಗೆ ತೆಗೆದವುಗಳು ಭಕ್ಷಕಡ 50 ರಿಂದ 75 ತಷ್ಟು ಹೆಚ್ಚಿರುವುವು

ಬಾತು ಮರಿಗಳು.

1, ಮೊಟ್ಟೆಯೊಡೆದು 36 ಇಲ್ಲವೇ 48 ಘಂಟೆಗಳಿಗೆ ಯಾವ ಆಹಾರವನ್ನೂ ಕೊಡಕೂಡದು,

2, ಅನಂತರ ಒಂದೆರಡು ದಿನ ಬೈಡ್ಡಿನ ಒಳಭಾಗದ ಪದಾರ್ಥವನ್ನು ಹಾಲಿನಲ್ಲಿ ಅದ್ದಿ ಕೊಡಬೇಕು.

3, ಅಲ್ಲಿಂದ ಬೈಡ್ಡು, ಹಾಲಿನೊಡನೆ ಗೋಧಿ ಹೊಮತ್ತು ಸ್ವಲ್ಪ ಮೆಂಥ್ಯ ಮಿಶ್ರವಾದ ಅಕ್ಕಿ ಹುಡಿಯನ್ನು ಕೊಡಬಹುದು, ದಿನ ದಿನಕ್ಕೆ ಕ್ರಮವಾಗಿ ಬೈಡ್ಡು ಹಾಲಿನ ಕಡಿಮೆ ಮಾಡುತ್ತಿದ್ದು 10 ದಿನಗಳ ನಂತರ ಅದನ್ನು ನಿಲ್ಲಿಸಿ ಗೋಧಿ ಹೊಟ್ಟು ಮತ್ತು ಅಕ್ಕಿ ಹುಡಿಯನ್ನು ಮಾತ್ರ ನೀರಿನಲ್ಲಿ ಮಿಶ್ರಮಾಡಿ ಕೊಡಬಹುದು,

ನಾಪೋಕ್ಲು ಶಾಲೆಯ ಮಣಿಮಹೋತ್ಸವ.

(ನಮ್ಮ ಪತ್ರಿಕಾ ವರದಿಗಾರರಿಂದ.)

(ನಾಪೋಕ್ಲು ಮೊಡೆಲ್ ಶಾಲೆ.)

ಶಾ. 15 ರಲ್ಲು ನಾಪೋಕ್ಲು ಶಾಲೆಯ ಮಣಿಮಹೋತ್ಸವವು ಕೊಡಗು ಶಾಲೆಗಳ ಡಿ, ಇ, ರಾದ ಮೆ, ಬಿ, ಯಸ್, ಕುಶಾಲಪ್ಪ ಬಿ, ಎ, ಡಿ, ಇ, (ಲಂಡನ್) ಇವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನಡೆಯಿತು,

ಕಾರ್ಯಕ್ರಮದಂತೆ ಬೆಳಿಗ್ಗೆ 9 ಘಂಟೆಗೆ ಬಾಲಕರಿಗೂ ಪಬ್ಲಿಕ್‌ನವರಿಗೆ ಆಟ ಓಟಗಳ ಸ್ಪರ್ಧೆಗಳು ನಡೆದವು, ಶಾಲಾ ಮೈದಾನವು ಜನರಿಂದ ಕುದಿಯುತ್ತಿತ್ತು. ಒಂದು ಘಂಟೆಯ ವರೆಗೂ ಸ್ಪರ್ಧೆಗಳು ನಡೆದವು ಚಿಕ್ಕ ಮತ್ತು ದೊಡ್ಡ ಬಾಲಕ ಬಾಲಕಿಯರಿಗೆ ಓಟಗಳು ಮಾತ್ರವಿದ್ದುದಲ್ಲದೆ ಮಹನೀಯರಿಗೂ ಮುದುಕರಿಗೂ ಓಟಗಳು ಇದ್ದವು, ಒಂದು ಮೈಲು ಓಟದಲ್ಲಿ ಮೆ, ಯಂ, ಸಿ, ಸೋಮೈಯ್ಯನವರು ಚೆನ್ನಾಗಿ ಓಡಿ ಮುಂದೆ ಬಂದರು,

ಒಂದು ಗಂಟೆಗೆ ಚಪ್ಪರದಲ್ಲಿ ಶ್ರೀ ಶಾರದಾಪೂಜೆಯು ಬಾಲಕಿಯರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಪ್ರಸಾದವಿನಿಯೋಗವನ್ನು ಶಾಲೆಯಲ್ಲಿ ಏರ್ಪಡಿಸಿದ್ದರು, ಬ್ರಾಹ್ಮಣರಿಗೆ ಊರು ದೇವಸ್ಥಾನದಲ್ಲೂ ಮಹಮದೀಯರಿಗೆ ಪೇಟೆಯಲ್ಲೂ ಬೇರೆ ಬೇರೆಯಾಗಿ ಏರ್ಪಡಿಸಿದ್ದರು. ಊಟಕ್ಕೆ ಮೂರು ಕಡೆಗಳಲ್ಲಿ ಒಟ್ಟು ಐದು ಸಾವಿರ ಜನರಿಗಿಂತ ಹೆಚ್ಚಿದ್ದರು,

ಸರಿಗಿ ಮೂರು ಘಂಟೆಗೆ ತೆಂಗಿನಕಾಯಿಗೆ ಗುರಿಹೊಡೆಯುವ ಸ್ಪರ್ಧೆಯನ್ನು ಪ್ರಾರಂಭಿಸಿದರು. ನಾಲ್ಕು ಘಂಟೆಗೆ ಅಧ್ಯಕ್ಷರನ್ನು ಮಂಗಲೆಯಿಂದ ಮೆರವಣಿಗೆಯಲ್ಲಿ ಶಾಲಾ ಮೈದಾನದಲ್ಲಿ ಹಾಕಿದ್ದ ಚಪ್ಪರಕ್ಕೆ ಕರಕೊಂಡು ಬಂದರು, ಜನರು ಕುಂಬಾ ನೆರೆದಿದ್ದರು. ಶಾಲೆಯ ಹೆಡ್ ಮಾಸ್ಟರರು ಅಧ್ಯಕ್ಷರನ್ನು ಸಭೆಗೆ ಪರಿಚಯವನ್ನು ಮಾಡುತ್ತಾ ಬೇರೆ ಬೇರೆ ಭಾಗಗಳಲ್ಲಿ ಎಂದರೆ ಪೈಡ್ ಪೈಪರ್ ಸಂಘದಲ್ಲಿ, ಸಾಹಿತ್ಯದ ಸೇವೆಯಲ್ಲಿ ಮೊದಲಾದ ಸಂಸ್ಥೆಗಳಲ್ಲಿ ಕೆಲಸ ಮಾಡಿ ಕೊಡಗಿನ ಶಿಕ್ಷಣ ಕ್ರಮವನ್ನು ಹೇಗೆ ಜನರ ಹಿತಕಕ್ಕಾಗಿ ತರುತ್ತಿದ್ದುವು ಇದನ್ನು ಒತ್ತಿ ಹೇಳಿದರು,

ಅಧ್ಯಕ್ಷರು ತಮ್ಮ ಸ್ಥಾನವನ್ನು ಸ್ವೀಕರಿಸಿದ ನಂತರ ಶಾಲೆಯ ಹೆಡ್ ಮಾಸ್ಟರರು ತಮ್ಮ ವರದಿಯನ್ನು ಓದಿದರು, ಶಾಲೆಯು ಈ ವರ್ಷ ಪ್ರಾರಂಭವಾಗಿ 61 ವರ್ಷಗಳಾದುದರಿಂದ ಈ ಮಣಿಮಹೋತ್ಸವವನ್ನು (Diamond Jubilee) ಆಚರಿಸುತ್ತಿರುವೆವೆಂದೂ ಈ ಜ್ಞಾಪಕಾರ್ಥವಾಗಿ ಶಾಲೆಯಲ್ಲಿ ಬಡ ಹುಡುಗರ ನಿಧಿ, ಸೆರ್ವಂಟ್ಸ್, ಜೀನು ಕೋಳಿ ಸಾಕುವಿಕೆ ಮೊದಲಾದ ಸಂಸ್ಥೆಗಳನ್ನು ಸ್ಥಾಪಿಸಿರುವೆವೆಂದೂ ಹೇಳಿ ಶಾಲೆಯಲ್ಲಿ ವಿಧವಿಧ ಚಟುವಟಿಕೆಗಳನ್ನು ವಿವರಿಸಿದರು, ಬಾಲಕರ ಕೂಟದ ಕಾರ್ಯವಿಧಾನವು ಸಂಘದ ವರದಿಯನ್ನು ಸಭೆಯ ಮುಂದಿಟ್ಟನು, ಇತರ ಅಧ್ಯಕ್ಷರು ಶಾಲೆಯ ತರಗತಿಗಳಲ್ಲೂ, ಆಟಗಳಲ್ಲೂ ಮುಂದೆ ಬಂದವರಿಗೆ ಬಹುಮಾನಗಳನ್ನು ಹಂಚಿದರು,

ಆ ಮೇಲೆ ಶಾಲೆಯ ಹಳೇ ವಿದ್ಯಾರ್ಥಿಯೂ 'ಉದಯ ಪತ್ರಿಕೆಯ ಸಂವಾದಕರೂ ಆದ ಮೆ, ಬಿ, ಯಂ, ಕಾರ್ಯಪ್ಪನವರು ಶಾಲೆಯ 'ಟೋಸ್ಟ್'ನ್ನು ಹೇಳಿದರು, ಇನ್ನೊಬ್ಬ ವಿದ್ಯಾರ್ಥಿಯಾದ ಮೆ, ಕೆ, ಅಚ್ಚಪ್ಪನವರು ಪ್ರತಿಕ್ರಿಯಾವಾದ ಮಾಡಿದರು,

ಇವರ ಭಾಷಣಗಳಾದ ನಂತರ ಬೇರೆ ಕಡೆಗಳಿಂದ ಬಂದ ಅಭಿನಂದನಾ ಪತ್ರಗಳಲ್ಲಿ ಕೆಲವನ್ನು ಸಭೆಯ ಮುಂದೆ ಶಾಲೆಯ ಹೆಡ್ ಮಾಸ್ಟರರು ಓದಿ ಹೇಳಿದರು, ಅಪ್ಪನೆರವಂಡ ಹರದಾಸ್ ಕವಿಗಳು ಮುದ್ದು ಬಾಲಕರಿಗೆ ಇನಾಂ ಹಂಚಲು 25 ಪುಸ್ತಕಗಳನ್ನು ತಂದಿರಿಸಿರುವರೆಂದೂ ಓದಿ ಹೇಳಿದರು,

ನಾಪೋಕ್ಲು ಗವರ್ನ್‌ಮೆಂಟ್ ಮೋಡೆಲ್ ಶಾಲೆಯ ಮಣಿಮಹೋತ್ಸವದ ಜ್ಞಾಪಕಾರ್ಥವಾಗಿ ಶಾಲೆಯವರು ಮಾಡಿಸಿದ ಶಾಶ್ವತಿಕೆ ಅಥವಾ ವಿಶೇಷ ಸಂಚಿಕೆಯೆಂಬ ಪುಸ್ತಕವನ್ನು ಅಧ್ಯಕ್ಷರಿಗೆ ಹೆಡ್ ಮಾಸ್ಟರು ಒಪ್ಪಿಸಿದರು, ಅದನ್ನು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮಾಡುತ್ತಾ ಶಾಲೆಗಾನುದವರಿಗೂ ಇರುವ ಸಂಬಂಧವನ್ನೂ ಇನ್ನೂ ಶಾಲೆಯೋದ್ಧಾರಕ ವಿಷಯಗಳನ್ನು ವಿವರವಾಗಿ ಸಭೆಗೆ ಬೋಧಿಸಿದರು, ವಂದನೆಗಳೊಡನೆ ಸಭೆಯು ಮುಗಿಯಿತು

ಸಂಜೆ ಆರೂವರೆ ಗಂಟೆಗೆ ಶಾಲೆಯ ಹಾಲಿನಲ್ಲಿ ಇಷ್ ಮತ್ತು ಕನ್ನಡ ಸಾಟಕಗಳು ಅಭಿನಯಿಸಲ್ಪಟ್ಟವು ಕಾರಾಂ ಎಂಬ ನಾಟಕವನ್ನು ಶಾಲೆಯ ಬಾಲಕಿಯರೇ ನಯಿಸಿದ್ದು ಸ್ವೋತ್ಕರ್ಷಕವಾದದ್ದು, ಎಲ್ಲಾ ಕಾರ್ಯಗಳೂ ಮುಗಿದವು

ಸನ್ 1882ನೇ ಇಸವಿ ಇಂಡಿಯನ್ ಟ್ರಸ್ಟ್ ಆಕ್ಟಿಗೆ ಒಳಪಟ್ಟು ಸರಕಾರದ ಭರವಸೆಯುಳ್ಳ

ದಿ ಬೋಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಅಧ್ಯಕ್ಷರು—ಮಾನನೀಯ ಸರ್ ಲಲ್ಲುಭಾಯಿ ಸಾಮಲದಾಸ್,
ಕೆ. ಟಿ. ಸಿ. ಐ. ಇ., ಜೆ. ಪಿ. ಯವರು.

ಕೋಚ್ಚಿಕಾರ್ ಬ್ರದರ್ಸ್ ಮದ್ರಾಸು ಬ್ರಾಂಚ್ ಸೆಕ್ರೆಟರಿಗಳು.

ಕಳೆದ ಲಾಭ ಹಂಚುವಿಕೆಯಲ್ಲಿ ರೂ. 18ರಿಂದ 23ರ ವರೆಗೆ ಬೋನಸು ಡಿಕ್ಲೇರಾಗಿರುತ್ತೆ.

ಹಿಂದಿಯರಿಂದ ಸ್ಥಾಪಿಸಲ್ಪಟ್ಟು ಹಿಂದೂದೇಶದವರಿಗಾಗಿ ಜೀವವಿಮೆಗೆ ಸಮ್ಮಂದಪಟ್ಟಿರುವ ಅತ್ಯುತ್ತಮ ತರದ ಲಕ್ಷಣಗಳಿಂದ ಕೂಡಿ ಕಮ್ಮಿ ಪ್ರೀಮಿಯಮ್ ದರದಲ್ಲಿ ಪಾಲಿಸಿ ಕೊಡುವ ಕಂಪೆನಿ ಇದೆಂದು ಮನವರ್ತಿ ನಂಬಿರಿ.
ಪತಿ ವರ್ತಿಯರು ಮತ್ತು ವ್ಯಾಪಾರಸ್ಥರು ವಗೈರೆಯವರಿಗೆ ಏಕೀಭವಿಸಿ (ಜಾಯಿಂಟ್ ಲೈಫ್)
ಪಾಲಿಸಿ ಕಮ್ಮಿ ಪ್ರೀಮಿಯಮ್ ದರದಲ್ಲಿ ಕೊಡುವ ಈ ಕಂಪೆನಿಯು ಹೆಸರುಗೊಂಡಿದೆ.
ಪಾಲಿಸಿದಾರರು ಅಕಾಸಾತ್ತಾಗಿ ಅಂಗಹೀನರಾದರೆ ಅಂಥವರಿಗೆ ಪಾಲಿಸಿಯ ಮೊಬಲಗನ್ನು ಮುಂದಿನ ಪ್ರೀಮಿಯಮ್ ವಸೂಲಾತಿ ಇಲ್ಲದೆ ಪೆನ್ಶನ್ ರೀತಿಯಲ್ಲಿ ಉದಾರತ್ವದಿಂದ ಕೊಡಲು
ಈ ಕಂಪೆನಿಯು ಎದುರು ನಿಂತಿದೆ ಎಂದು ನೆನಪಿರಲಿ.
ಮುತುವರ್ಜಿಯಿಂದ ಕೆಲಸ ಮಾಡಲು ಇಚ್ಛಿಸುವ ಗಂಡಸರು ಮತ್ತು ಹೆಂಗಸರಿಗೆ
ಉತ್ತಮ ತರಹದ ಕಮಿಶನ್ ವಗೈರೆಯಿಂದ ಏಜೆನ್ಸಿ ಕೊಡಲಾಗುತ್ತೆ.

ಹೆಚ್ಚಿನ ಮಾಹಿತಿಗೆ—ಬಿ. ಎಸ್. ಐಯ್ಯಪ್ಪು,
ಕೊಡಗು ಚೀಫ್ ಏಜೆಂಟ್,
26—11 ಮಹದೇವಪೇಟೆ, ಮಡಿಕೇರಿ.



ಉತ್ತಮ ಪ್ರತಿಫಲ ಯಾವದರಲ್ಲಿ?

501 ಸಾಬೂನು — ಅತ್ಯಲ್ಪ ವೀರ್ಯಾಂಶದಿಂದ ಕೂಡಿದ,
ಒಳ್ಳೇ ಘಟ್ಟಿ ಸಾಬೂನು.



ಅರ್ಧಾಂಶಕ್ಕಿಂತ ಹೆಚ್ಚು ನೀರು ಬೆರೆತಿದ್ದು, ನೋಟಕ್ಕೆ
ಒಳ್ಳೇ ಸಾಬೂನಿನಂತೆ ಕಾಣುವ ಇತರ ಸಾಬೂನು

ಆಗ್ಗವಾದ—ಸಾಬೂನುಗಳನ್ನು ಕೊಂಡುಕೊಳ್ಳುವದು ಹೆಚ್ಚು ಖರ್ಚಿಗ
ಕಾರಣ. ಯೂತಕ್ಕೆಂದರೆ ಸಾಬೂನಿಗಾಗಿ ನೀವು ಹಣಕೊಟ್ಟು ಅರ್ಧ ತುಂಡು
ಸಾಬೂನನ್ನು ಮಾತ್ರ ಪಡೆಯಿರಿ. ಈ ಸಾಬೂನುಗಳಲ್ಲಿ 50% ರಷ್ಟು ನೀರೇ.
501 ಸಾಬೂನು ಜಿನ್ನಾಗಿ ಕೊಳೆಯನ್ನು ತೆಗೆಯುತ್ತದೆ ಮತ್ತು ಹೆಚ್ಚು ಬಾಳಿ
ಕೆ ಬರುವದರಲ್ಲಿ ಅಚ್ಚಯವಿಲ್ಲ!

501 Soap

ವೆಚ್ಚ ಕಡಿಮೆ.
ವಸ್ತ್ರ ಬಾಳಿಕೆ.
ಶ್ರಮ ಅತೀ ಕಡಮೆ!

ಟಾಮ್‌ಕೋ
ಮೂರಾಟದ ಮಳಿಗೆ,
TOMCo
೧, ಸೆಂಟ್ರಲ್ ಸ್ಟ್ರೀಟ್,
ಬೆಂಗಳೂರು ದಂಡು.

ತಯಾರಿಸುವವರು—ತಾತಾ ಆಯಿಲ್ ಮಿಲ್, ಕಂಪೆನಿ, ಲಿಮಿಟೆಡ್, ಬಿನಂಬಾಯಿ, ಮತ್ತು ತಾತಾಪುರ.

52-39 ಕೊಡಗಿನ ಡಿಸ್ಟ್ರಿಬ್ಯೂಟರ್—ಬಿ ಎಸ್ ಸುಬ್ಬಣ್ಣ, ಸಂತೆಪೇಟೆ, ಮೈಸೂರು.

ನೂತನ! ಮನೋಲ್ಲಾಸಕರ!! ಶುಚಿಕರ!!! ಆದರ್ಶ ವಿಶ್ರಾಂತಿಗೃಹ!!!!

ಬೊಂಬಾಯಿ ರೆಸ್ಟೋರೆಂಟ್

ಇದೇ ತಾ. 19—2—1935ರಲ್ಲಿ ಮಡಿಕೇರಿ ಚೌಕದಲ್ಲಿರುವ
ಹೊಸ ಕಟ್ಟಡದಲ್ಲಿ ತೆರೆಯಲ್ಪಟ್ಟಿದೆ.

ಆರೋಗ್ಯಕರವೂ ಆಧಿ ನಿಕವೂ ಆದ ಉಪಹಾರ ಗೃಹವೊಂದನ್ನು ನಿರೀಕ್ಷಿಸುವ ಮಹನೀಯರುಗಳ
ಸೌಕರ್ಯಕ್ಕಾಗಿ ತೆರೆಯಲಾಗುವುದು.

ಶುದ್ಧವೂ ಪುಷ್ಟಿಕರವೂ, ಆರೋಗ್ಯಕರವೂ ಆದ ತಿಂಡಿತಿನಸುಗಳನ್ನೂ
ಕಾಫಿ—ಚಹಾ—ಕೊಕ್ಕೋ—ಶರ್ಬತ್ತು ಇತ್ಯಾದಿ ಪಾನೀಯಗಳನ್ನೂ—
ಕೇವಲ ಹಲವು ವರ್ಷಗಳ ಅನುಭವಿಕರಿಂದ ತಯಾರಿಸಲ್ಪಡುವುದು.

ಗಿರಾಕಿಗಳ ಸೌಕರ್ಯವನ್ನು ಲಕ್ಷಿಸಿ, ಆಸನಗಳ—ವಿಶಾಲ ಕೊಠಡಿಗಳ—ಕಾರ್ಯೋತ್ಸಾಹೀ
ವಿನೀತ ಸೇವಕರ ಏರ್ಪಾಡು ಇದೆ.

ಆಯಕ್ಕೆ ತಕ್ಕ ವ್ಯಯವೂಡುಹವರು, ವ್ಯಯಕ್ಕೆ ತಕ್ಕ ಆಯವನ್ನು ಹೊಂದಬೇಕಾದ ಅತ್ಯಾಧುನಿಕ
ಈ ವಿಶ್ರಾಂತಿಗೃಹದಲ್ಲಿ—

ನೀವು ಅಪೇಕ್ಷಿಸಿದ—ನೀವು ವಿರೀಕ್ಷಿಸಿದ—ನೀವು ಹೊಂದಲೇಬೇಕಾದ—
ಸಕಲ ಅನಕೂಲತೆಗಳನ್ನು ಕಂಡು, ಪೂರ್ಣ ತೃಪ್ತಿಹೊಂದಿರಿ.

ಮದುವೆ ಮತ್ತು ಉಪನಯನ ಸಮಾರಂಭಗಳಲ್ಲಿಯೂ ಮತ್ತು "ಟೀ"ಪಾರ್ಟಿ—
"ಎಟ್-ಹೋಮ್"ಗಳಲ್ಲಿಯೂ ನಮ್ಮನ್ನು ಮರೆಯಬೇಡಿ.

52—10 ಪ್ರೊಪ್ರೈಟರ್:—ನಾಮುನ ರಾವ್, ಗಾಯತೆ ಎಂಡೆ.

ಮುಂಬಯಿ ಕೊಡಗು ಸಂಘ.

ಮೈ. ಎ. ಕೆ. ಸದಾಶಿವಶಾಸ್ತ್ರಿಗಳವರು ಮುಂಬಯಿಯಿಂದ ಈ ರೀತಿ ಬರೆಯುತ್ತಾರೆ:—

ಮುಂಬಯಿ ಕೊಡಗು ಸಂಘದ ಆಶ್ರಯದಲ್ಲಿ ಶ್ರೀಯುತ ಬೇಲೂರು ಕೇಶವದಾಸರು ತಾರೀಕು 25—1—36 ರಲ್ಲಿ 'ಸುಭದ್ರಾಹರಣ' ವೆಂಬ ಹರಿಕಥೆಯನ್ನು ಮೈ. ಯುಂ. ಎಸ್. ಮುತ್ತಣ್ಣ ಬಿ. ಎ, ಎಲ್ ಎಲ್. ಬಿ. ಯವರ ಭವನದಲ್ಲಿ ನಡಿಸಿದರು. ಮುಂಬಯಿಯ ಪ್ರಕೃತದ ಚಳಿಯು ತೀಕ್ಷ್ಣವಾಗಿದ್ದರೂ ಅದನ್ನು ಗಣನೆಗೆ ತಾರದೆ ಅನೇಕ ಮೆಂಬರುಗಳೂ ಹಾಜರಿದ್ದರಲ್ಲದೆ ಹೊರಗಿನಿಂದ ಕೆಲವು ಅತಿಥಿಗಳೂ ಗೌರವಿಸಿದ್ದರು. ಅವರಲ್ಲಿ ಮುಖ್ಯವಾಗಿ ಮೈ. ಸೆಬ್ಲೂರರೂ ಮತ್ತು ಮಿಸೆಸ್ ಸೆಬ್ಲೂರರೂ, ಮೈ. ದೇವಶಾಸ್ತ್ರಿಗಳವರೂ ಮತ್ತು ಮುಂಬಯಿ ಕರ್ನಾಟಕ ಸಂಘದ ಕಾರ್ಯದರ್ಶಿಗಳಾದ ಮೈ. ಬೆಟ್ಟಗೇರಿಯವರೂ ಆಗಿದ್ದರು.

ಶ್ರೀಯುತ ಥಾಸರು ಕರ್ನಾಟಕ ರಂಗಭೂಮಿಯಲ್ಲಿ ಪರಿಚಿತ ವ್ಯಕ್ತಿಗಳಲ್ಲಿ ಕೀರ್ತನಾಉಪನ್ಯಾಸದಿಂದ ಬಹು ಪ್ರಾಶಸ್ಯವನ್ನು ಪಡೆದವರು. ಅವರಲ್ಲೂ ನಮ್ಮ ಪುಟ್ಟ ಕೊಡಗಿಗ ಹೊಸಬರೇನೂ ಅಲ್ಲ. ಅವರ ಹೆಸರನ್ನು ಅರಿಯದವರು ಅತಿ ವಿರಳವೆನ್ನಬೇಕು. ಕೊಡಗಿನ ಒಂದು ಮೂಲೆಯಲ್ಲಿ ಹರಿಕೀರ್ತನೆಯಾಗುವದೆಂದರೆ—'ಓಹೊ' ನಮ್ಮ ಕೇಶವದಾಸರೆ? ಅಂದರೆ ನಡೆಯಿರಿ, ಹೋಗೋಣ' ಎಂಬ ಉದ್ಗಾರಗಳು ಪ್ರತಿ ವ್ಯಕ್ತಿಯ ಬಾಯಿಂದ ಹೊರಬೀಳದಿರದು. ಅದ ಮೇಲೆ ತಾನು ಕೊಡಗು ಜನರ ಸಾಮಾನ್ಯತೆಗೆ ಉದಾರತ್ವಕ್ಕೂ ಮತ್ತು ಸೌಜನ್ಯ ಶೀಲತೆಗೂ ತಲೆದೂಗಿರುವೆನೆಂದು ಶ್ರೀಯುತದಾಸರು ಹೇಳಿದರಲ್ಲಿ ಆಶ್ಚರ್ಯವೇನು?

ಕಥೆಯು ಮಹಾಭಾರತದಲ್ಲಿನ ಒಂದು ಚಿಕ್ಕ ಘಟನೆಯು. ಪ್ರಸ್ತುತದಲ್ಲಿ ಅವನ್ನು ಇಲ್ಲಿ ಹೇಳುವ ಅವಶ್ಯವಿಲ್ಲ. ಏಕೆಂದರೆ 'ಸುಭದ್ರಾಹರಣ'ವನ್ನ ಕೇಳದವರಿಲ್ಲ. ಓದದವರಿಲ್ಲ. ನಾಟಕಗಳಲ್ಲಿ ನೋಡದವರಿಲ್ಲ. ಶ್ರೀಯುತ ದಾಸರು ನಾಟಕದಲ್ಲಿ ನಾವು ನೋಡುವಂತೆ ಕೀರ್ತನೆ ನಡೆಸುವವರಲ್ಲ. ಅರ್ಜುನನು ಸನ್ಯಾಸಿಯ ವೇಷದಿಂದ ಬಂದು ಯಾರೂ ಇಲ್ಲದ ವೇಳೆಯಲ್ಲಿ ಒಬ್ಬ ಸುಂದರ ಯುವತಿಯನ್ನು ಕದ್ದೊಯ್ಯುವುದಂತೆ! ಅಲ್ಲದೆ ಒಬ್ಬ ಸ್ತ್ರೀಯು ಐದು ಮಂದಿ ಪತಿಗಳನ್ನು ಏವಾಹ ಮಾಡಿಕೊಂಡು ಪ್ರತಿ ಒಂದು ವರ್ಷವೂ ಒಬ್ಬೊಬ್ಬ ಪತಿಯೊಡನೆ ಸಂಸಾರ ನಡೆಸುವುದಂತೆ!! ನೋಡುವವರಿಗೆ ಮನೋರಂಜಿತವಾಗುವಂತೆ ಉಪ್ಪು ಕಾರ ಬೆರಸಿ ನಟಿಸಲ್ಪಡುವ ಕಥೆಗೆ ಸಾಧಾರಣ ವ್ಯಕ್ತಿಯು ಖೊ! ಎಂದು ಗೊಳ್ಳನೆ ನಗದಿರನು. ಆದರೆ ಅದರ ಗೂಢಾರ್ಥವನ್ನು ತಿಳಿದುಕೊಳ್ಳುವ ಕಾರ್ಯದಲ್ಲಿ ಪ್ರಯತ್ನನಾಗುವುದಿಲ್ಲ. ಗ್ರಂಥಕರ್ತನ ಕವಿತಾಶಕ್ತಿಯನ್ನು ಪ್ರಶಂಸಿಸುವನು ಮಾತ್ರ. ಇದರಿಂದ ನಿಶ್ಚಯವಾಗಿಯೂ ಏಷ್ಟೊಂದು ಹಾನಿಯನ್ನು ತಂದುಕೊಂಡೆವೆಂದು ಯೋಚಿಸಿದರೆ ಬಹು ಪಶ್ಚಾತ್ತಾಪವಾಗುವುದು. ಏಕೆಂದರೆ ಎಶ್ಟೋ ಪುರಾಣ ಕಥೆಗಳೂ ಉಪ್ಪು ಕಾರ ಬೆರೆಸಿ ಹೇಳಲ್ಪಟ್ಟಿರುವದರಿಂದ ಪಾಶ್ಚಾತ್ಯ ನಾಗರೀಕತೆಗೆ ಬಲಿಬಿದ್ದು ಶುದ್ಧ ನಾಸ್ತಿಕರಾದ ನಾವು, ನಮ್ಮಲ್ಲಿ ಕೆಲವರು, 'ಇಂಥಾ ಪೊಳ್ಳು ಕಥೆಯೆ, ನಮ್ಮ ಪುರಾಣಗಳು! ಇವನ್ನು ನಂಬಲು ನಾವೇನೂ ಮೂಢರಲ್ಲ!' ಎಂಬುವುದಾಗಿ ಹೇಳುವುದುಂಟು. ನಮ್ಮನ್ನು ನಾವೇ ಪರರ ಇದಿರಿಗೆ ನಗೆಗೀಡಾಗಿ ಮಾಡಿಕೊಂಡಿರುವೆವು! ಆದರೆ ಶ್ರೀಯುತದಾಸರ ದಾರಿಯೇ ಬೇರೆ. ಅವರು ಅಸಂಬದ್ಧ ಪ್ರಲಾಪಗಳ ಗೋಜಿಗೆ ಹೋಗದೆ ತಮ್ಮ ಕೀರ್ತನ ಶ್ರವಣದಿಂದ ಜನರಲ್ಲಿ ತತ್ವಜ್ಞಾನವು ತಲೆದೋರುವಂತೆ ಮಾಡುವರು. ಅದೇ ಅವರ ಧ್ಯೇಯವೆನ್ನಬೇಕು. ಈ ತತ್ವಜ್ಞಾನದ ಪ್ರಚಾರದಲ್ಲಿ ಉದ್ಯುಕ್ತರಾದ್ದು ಕನ್ನಡಿಗರ ಪರಮ ಭಾಗ್ಯೋದಯವೆನ್ನಬಹುದು. ದಾಸರ ಕೀರ್ತನೆಯಿಂದ ಒಮ್ಮೆಲೆ ಅವರ ಕಥೆಯ ಗೂಢಾರ್ಥವು ಮನಸ್ಸಿಗೆ ಹೊಳೆಯದು 'ಸುಭದ್ರಾಹರಣ'ದಲ್ಲಿನ ತತ್ವವೇನು? ಸುಲಭವಾಗಿ ತಿನಿಂದ ಹೇಳುವದಾದರೆ ಅರ್ಜುನನೆಂಬ ಜೀವಾತ್ಮನು ಪ್ರಪಂಚದ ಕಾನು ಕ್ರೋಧ ಲೋಭಾದಿಗಳನ್ನು ಜಯಿಸಿ ಈಶ್ವರನ ತದೇಕ ಧ್ಯಾನದಿಂದ ಕೊನೆಯಲ್ಲಿ ಪರಾಧಾಮವನ್ನು ಅಂದರೆ ಸುಭದ್ರೆಯನ್ನು ಹೊಂದಿದನೆಂದು.

ನವನಾಗರೀಕತೆಯ ಎಲ್ಲೆಯನ್ನು ವಿಾರಿರುವ ನಾವು ಈಗಿನ ಸ್ವೇಚ್ಛಾವಸ್ಥೆಯಿಂದ ಜಾಗೃತರಾಗಿ ನಮ್ಮ ಪುರಾಣಗಳಿಗೆ ತಕ್ಕ ಪೂಜ್ಯತೆಯನ್ನು ಕೊಡದೆ ಹೋದರೆ ಹಿಂದೂ ಧರ್ಮವೇ ಒಂದಾನೊಂದು ಕಾಲದಲ್ಲಿ ತಿಥಿವಾರಿ ಹೋಗುವುದರಲ್ಲಿ ಸಂಶಯವಿಲ್ಲ. ಕೃತಯುಗದಲ್ಲಿ ಧರ್ಮವು ನಾಲ್ಕು ಕಾಲುಗಳೂರಿ ನಿಂತಿದ್ದರಿಂದ ಆಗ ಜನರಲ್ಲಿ ಸುಖಶಾಂತಿಗಳು ನೆಲೆಗೊಂಡಿದ್ದುವೆಂದು ಪುರಾಣಗಳು ಕೂಗಿ ಹೇಳುತ್ತಿವೆ. ನಂತರ ತ್ರೇತಾ, ದ್ವಾಪರ, ಕಲಿಯುಗಗಳಲ್ಲಿ ಜನರಲ್ಲಿಯು ಸಂಬಿಕೆಯೂ ಸಹಕಾರವೂ ಕುಗ್ಗುತ್ತಾ ಬಂದ್ದದರಿಂದ ಧರ್ಮವು ಕಾಲೂರಿ ನಿಲ್ಲದಂತಾಗುತ್ತಾ ಬಂದು ಕಡೆಗೆ ಈ ಕಲಿಯುಗದಲ್ಲಿ ಧರ್ಮವು ಒಂದು ಕಾಲಿನಿಂದ ನಿಂತರೂ ಆ ಕಾಲೂ ಕುಂಟು ಬಿದ್ದಿರುವುದಂತೆ! ಇದಕ್ಕೆ ಕಾರಣರಾರು? ಅಂಗೈ ಹುಣ್ಣಿಗೆ ಕನ್ನಡಿ ಬೇಕೆ?

ಅತ್ಯದಲ್ಲಿ ಮೈ. ಐ. ಕಾರ್ಯಪ್ಪನವರು ಸಂಘದ ಪರವಾಗಿ, ಬಂದಿದ್ದ ಅತಿಥಿಗಳಿಗೆ ವಂದಿಸಿದರು. ಮುಂಗಳಾಚರಣೆಯಾದ ಬಳಿಕ ಪ್ರಸಾದ ಹುಡಿಲ್ಪಟ್ಟು ರಾತ್ರಿ ಒಂಬತ್ತು ಗಂಟೆಗೆ ಎಲ್ಲವೂ ಮುಕ್ತಾಯವಾಯಿತು.

ಕೊಡಗು

ಫೆಬ್ರವರಿ ತಾ. ೨೧ನೇ ಶುಕ್ರವಾರ ೧೯೩೬.

ದೇಶದವರ ಅಭಿಪ್ರಾಯ.

ಜವಿೂನ್ದಾರರ ಸಂಘವು ಕೊಡಗಿನಲ್ಲಿ ಏಕ ಮೊತ್ರ ರಾಜಕೀಯ ಸಂಸ್ಥೆಯಾಗಿದೆ. ಈ ಸಂಘವು ಸುಮೂರು 27 ವರ್ಷಗಳ ಹಿಂದೆ ಪ್ರಾರಂಭವಾದಂದಿನಿಂದಲೂ ಈ ದೇಶದ ಜನರ ಅದರಲ್ಲೂ ಹೆಚ್ಚಾಗಿ ರೈತರ ಹಿತವನ್ನು ಸಾಧಿಸಲು ಎಡೆ ಬಿಡದೆ ಪ್ರಯತ್ನಿಸುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಮಧ್ಯೆ ಈ ಪ್ರಾಂತ್ಯದಲ್ಲಿ ಕೆಲವು ಸಂಸ್ಥೆಗಳು ಹಣಬೆಯಂತೆ ಫಕ್ಕನೆ ಹುಟ್ಟಿ ಹಣಬೆಯಂತೆಯೇ ನಶಿಸಿ ಹೋದವು. ಆದರೆ ದೇಶೀಯರ ಏಳಿಗೆಯನ್ನೇ ಗುರಿಯಾಗಿಟ್ಟು ಕೊಂಡು ಕೆಲಸ ಮಾಡುತ್ತಿರುವ ಜವಿೂನ್ದಾರರ ಸಂಘವು ತನ್ನ ಪ್ರಯತ್ನವನ್ನು ಸತತವಾ ನಡಿಸುತ್ತಲೇ ಬಂದಿದೆ; ಈಗಲೂ ನಡೆಸುತ್ತಲೇ ಇದೆ. ಇಂಥಾ ಸಂಸ್ಥೆಗೆ ದೇಶಾಭಿವೂನಿಗಳು ಹೆಚ್ಚೆಚ್ಚಾಗಿ ಸೇರಿ ಅದನ್ನು ಮತ್ತಷ್ಟು ಬಲಪಡಿಸಬೇಕಾದದ್ದು ಅತ್ಯವಶ್ಯವಾಗಿದೆ.

ಪ್ರಸ್ತುತದಲ್ಲಿ ಕೊಡಗಿನ ನಿವಾಸಿಗಳಿಗೆ ಅತೀ ಪ್ರಾಮುಖ್ಯವಾದ ಮೂರು ವಿಷಯಗಳಲ್ಲಿ—ಅಂದರೆ ಭೂಮಿ ಗಿರ್ವಿ ಬ್ಯಾಂಕಿನ ಸ್ಥಾಪನೆ, ಕಂದಾಯ ವೂಫಿ ಮತ್ತು ರಾಜಕೀಯ ಸುಧಾರಣೆಗಳೇನೂ ದೊಂಕದಿರುವಿಕೆ—ಗ್ರಾವೂಂತರಗಳಲ್ಲಿರುವ ಜನಸಮುದಾಯಕ್ಕೆ ಸಾಕಷ್ಟು ತಿಳುವಳಿಕೆಗಳನ್ನು ಕೊಟ್ಟು, ಅವುಗಳ ಮೇಲೆ ಅವರ ಅಭಿಪ್ರಾಯವನ್ನು ತೆಗೆದು ಸರಕಾರದ ಮುಂದಿಡುವ ಪ್ರಯತ್ನವನ್ನು ಜವಿೂನ್ದಾರರ ಸಂಘವು ಕೈಕೊಂಡಿತ್ತು. ಕಳೆದ ಮೂರು ವಾರಗಳಿಂದ ದೇಶದ ಹಲವು ಮುಖ್ಯ ಸ್ಥಳಗಳಲ್ಲಿ ಸಾರ್ವಜನಿಕ ಸಭೆಗಳು ಸೇರಿಸಲ್ಪಟ್ಟಿದ್ದವು. ಒಂದು ವಾರಕ್ಕಿಂತ ಮುಂದಾಗಿಯೇ ವರ್ತವೂನ ಪತ್ರಿಕೆಯ ಮೂಲಕ ನೋಟೀಸು ಪ್ರಕಟವೂಡಿದ್ದರಿಂದ ಎಂಟಿಂಗಿಗೆ ಬರುವ ಅವಕಾಶವು ಎಲ್ಲರಿಗೂ ಇತ್ತು. ಹಾಗೆಯೇ ಹಲವರು ಬಂದು ಈ ಸಭೆಗಳಲ್ಲಿ ನೆರೆದಿದ್ದರು.

ಈ ಸಭೆಗಳಲ್ಲಿ ಚರ್ಚಿಸಿ ತೀರ್ವೂನಿಸಲ್ಪಟ್ಟ ಮೂರು ಸಂಗತಿಗಳಲ್ಲಿ ಜನರಿಗೆ ಹೊಸ ವಿಷಯವಾದ ಭೂಮಿ ಗಿರ್ವಿ ಬ್ಯಾಂಕಿನ ಸ್ಥಾಪನೆಯೇ ಚರ್ಚಾಸ್ಪದವಾದದ್ದಾಗಿತ್ತು. ಆರ್ಥಿಕ ವಿಚಾರಣಾ ಕವಿಟಿಯವರ ಮುಖ್ಯ ಸಿಫಾರಸ್ಸಾದ ಈ ವಿಷಯವು ಕೊಡಗಿನ ಕಳೆದ ಸಹಕಾರಿ ಪರಿಷತ್ತಿನಲ್ಲಿ ಚರ್ಚಿಸಲ್ಪಟ್ಟು ಅಲ್ಲಿ ಅದು ಹೇಗೆ ಬಹು ಚಿಕ್ಕ ಒಹುಮತದಿಂದ ವಾಸಾಯಿತೆಂಬುದನ್ನೂ, ಅದರಿಂದುಂಟಾದ ಪರಿಣಾವು ಏನೆಂಬುದನ್ನೂ ಕುರಿತು ಈ ವೊದಲೇ ಬರೆದಿದ್ದೆವು. ನಂತರ ಈ ವಿಚಾರವಾಗಿ ಸ್ಥಳೀಯ ವರ್ತವೂನ ಪತ್ರಿಕೆಗಳಲ್ಲಿ ವಿರೋಧ ಮತ್ತು ಪರ ಪಕ್ಷಗಳವರ ಅಭಿಪ್ರಾಯಗಳು ವಿವರವಾಗಿ ಬರೆಯಲ್ಪಟ್ಟಿದ್ದವು. ಅಲ್ಲದೆ ಎಲ್ಲಾ ಸಭೆಗಳಲ್ಲಿ ಈ ಸಂಗತಿಯು ಕೂಲಂಕುಷವಾಗಿ ಚರ್ಚಿಸಲ್ಪಟ್ಟಿತು. ಭೂಮಿ ಗಿರ್ವಿ ಬ್ಯಾಂಕಿನ ಸ್ಥಾಪನೆಯಿಂದ ಜನ್ಮ ವಗೈರೆ ರಿಯಾಯಿತಿಯ ಹಿಡುವಳಿಗೆ ಅವಾಮ ಉಂಟಿಂತಲೂ, ಈಗ ಕೆಲವು ವರ್ಷಗಳಿಂದ ರೈತರಿಗೆ ಸಹಾಯ ವೂಡುತ್ತಿರುವ ಸಹಕಾರಿ ಸಂಘಗಳಿಗೂ ಹಾಗೂ ಮಧ್ಯ ಸಂಸ್ಥೆಯೂದ ಸಹಕಾರಿ ಸೆಂಟ್ರಲ್ ಬ್ಯಾಂಕಿಗೂ ಧಕ್ಕೆ ತಗಲುವುದೆಂತಲೂ, ಕೊಡಗಿನಂಥ ಚಿಕ್ಕ ಪ್ರಾಂತ್ಯದಲ್ಲಿ ಅದರಲ್ಲೂ ದೊಡ್ಡ ಜವಿೂನ್ದಾರರ ಸಂಖ್ಯೆಯು ಒಹು ಕಡವೆಯಾಗಿರುವಲ್ಲಿ ಮತ್ತು ಮಳೆ ನೀರನ್ನೇ ನಂಬಿ ವ್ಯವಸಾಯ ವೂಡುತ್ತಾ ಭೂಮಿಯ ಬೆಲೆಯೂ ಏನುತ್ತಾ ಇಳೆಯುತ್ತಾ ಇರುವ ಇಲ್ಲಿ ಭೂಮಿ ಗಿರ್ವಿ ಬ್ಯಾಂಕು ಜಯಪ್ರದವಾಗಲಿಕ್ಕಿಲ್ಲವೆಂತಲೂ, ಕಾಫಿ ಪ್ಲಾಂಟರುಗಳಿಗೆ ಸಹಾಯಕರವಾಗದ ಮತ್ತು ಹೆಚ್ಚು ಖರ್ಚಿನಿಂದ ನಡೆಸಲ್ಪಡಬೇಕಾದ ಈ ಬ್ಯಾಂಕಿನಿಂದ ದೇಶಕ್ಕೆ ಹೆಚ್ಚು ನಷ್ಟವಾಗುವದೆಂತಲೂ ಜವಿೂನ್ದಾರರ ಸಂಘದ ಕಡೆಯವರು ಎಂಟಿಂಗಿನಲ್ಲಿ ನೆರೆದಿದ್ದ ವಹನೀಯರಿಗೆ ವಿಷದವಾಗಿ ತಿಳಿಸಿಕೊಟ್ಟರಲ್ಲದೆ ಆ ಬ್ಯಾಂಕಿನಿಂದ ಉಂಟಾಗುವ ಪ್ರಯೋಜನವನ್ನೂ ವಿವರಿಸಿ ಹೇಳಿದರು. ನಂತರ 'ಕೊಡಗಿನಲ್ಲಿ ಪ್ರತ್ಯೇಕ ಭೂಮಿ ಗಿರ್ವಿ ಬ್ಯಾಂಕನ್ನು ಸ್ಥಾಪಿಸುವುದರ ಬದಲು ಸಹಕಾರಿ ಸೆಂಟ್ರಲ್ ಬ್ಯಾಂಕಿನಲ್ಲೇ ದೀರ್ಘ ಕಂತಿನ ಸಾಲ ಕೊಡುವ ಏರ್ಪಾಡನ್ನು ವೂಡುವುದು ಉತ್ತವ' ವೆಂಬ ಗೊತ್ತುವಳಿಯು ಸಭೆಗಳ ಮುಂದಿಡಲಾಯಿತು. ಸರ್ಕಾರದವರು ಸಹಾಯ ವೂಡಿದರೆ ಸೆಂಟ್ರಲ್ ಬ್ಯಾಂಕಿನಲ್ಲೇ ದೀರ್ಘ ಕಂತಿನ ಕೈಪಣಾತಿಗಳನ್ನು ಪಡೆಯಲು ರೈತರಿಗೆ ಸಂಘಗಳ ಮೂಲಕ ದೀರ್ಘ ಕಂತಿನ ಸಾಲ ಕೊಡುವ ಏರ್ಪಾಡು ವೂಡಬಹುದೆಂದೂ ಸೂಚಿಸಲಾಯಿತು. ಕೊಡಗಿನಲ್ಲಿ ಈ ಸಂಬಂಧ ನಡೆಸಿದ ಒಟ್ಟು ಹತ್ತು ಸಾರ್ವಜನಿಕ ಸಭೆಗಳ ಪೈಕಿ ಫ್ರೇಜರ್‌ಪೇಟೆಯ ಎಂಟಿಂಗಿನಲ್ಲಿ ವೂತ್ರ ಹೆಚ್ಚಿನವರು ಸಾಗುಹಿಡುವಳಿದಾರರಾಗಿಯೂ, ನೆರೆದಿದ್ದವರೆ ಸಂಖ್ಯೆಯು ಕಡವೆಯಾಗಿಯೂ ಇದ್ದ ಕಾರಣ ಈ ವಿಷಯದ ತೀರ್ವೂನವು ಮುಂದಕ್ಕಿಡಲಾಯಿತು. ಅಮ್ಮತ್ತಿ ಮತ್ತು ಮೂರ್ನಾಡು ಎಂಟಿಂಗುಗಳಲ್ಲಿ ಒಬ್ಬಿಬ್ಬರು ತರಾವಿಗೆ ವಿರೋಧವಾಗಿ ವೂತಾಡಿದರು; ಸೋವೂವಾರಪೇಟೆ, ಗೋಣಿಕೊಪ್ಪಲು ಮತ್ತು ವೀರಾಜಪೇಟೆ ಸಭೆಗಳಲ್ಲಿ ಕೆಲವರು ಪ್ರಶ್ನೆ ಕೇಳಿ ಸಂಶಯಗಳನ್ನು ಪರಿಹರಿಸಿಕೊಂಡರು.. ಮೂರ್ನಾಡು ಎಂಟಿಂಗಿನಲ್ಲಿ ವೂತ್ರ ಈ ಗೊತ್ತುವಳಿಗೆ ವಿರೋಧವಾಗಿ ಇಬ್ಬರು ಓಟು ಕೊಟ್ಟದ್ದರಿಂದ ದೊಡ್ಡ ಬಹುಮತದಿಂದ ವಾಸಾಯಿತು. ಬಾಕಿ ಎಲ್ಲಾ ಕಡೆಗಳಲ್ಲಿ ತರಾವು ಸರ್ವ ಸವ್ಮತದಿಂದಲೇ ವಂಜೂರಾಯಿತು. ಇದರಿಂದ ಭೂಮಿ ಗಿರ್ವಿ ಬ್ಯಾಂಕಿನ ವಿಷಯದಲ್ಲಿ ದೇಶದವರ ಅಭಿಪ್ರಾಯವು ಹೇಗಿದೆ ಎಂಬುದು ವಿಷದವಾಗುತ್ತದೆ. ಇದೀಗ ದೇಶದವರು ಯಾವದೊಂದು ನಿರ್ಬಂಧವಿಲ್ಲದೆ ಸರಾಗವಾಗಿ ಕೊಟ್ಟಂಥ ಅಭಿಪ್ರಾಯ. ಈ ಎಂಟಿಂಗುಗಳಲ್ಲಿ ವಾಸಾದ ತರಾವುಗಳ ಪ್ರತಿಯನ್ನು ಆಯಾಯ ಎಂಟಿಂಗಿನ ಅಧ್ಯಕ್ಷರು ಕವಿಷನರವರಿಗೆ ಕಳುಹಿಸಿರುವುದಲ್ಲದೆ, ಎಂಟಿಂಗಿನಲ್ಲಾದ ಭಾಷಣ, ಚರ್ಚೆಗಳನ್ನೆಲ್ಲಾ ಸರಕಾರಿ 'ಶಾರ್ಟ್ ಹ್ಯಾಂಡ್' ರಿಪೋರ್ಟರು ಬರಕೊಂಡಿರುವದರಿಂದ ಎಲ್ಲಾ ವಿವರವನ್ನೂ ವೇಲಧಿಕಾರಿಗಳಿಗೆ ತಿಳಿಕೊಳ್ಳಲು ಅನುಕೂಲವಾಗಿದೆ. ಆದುದರಿಂದ ಸರ್ಕಾರದವರು ದೇಶದವರ ನಿಜವಾದ ಅಭಿಪ್ರಾಯಕ್ಕೆ ಬೆಲೆಕೊಟ್ಟು, ಅವರ ತೀರ್ವೂನವನ್ನು ನಡೆಸಿಕೊಡಲು ಹಿಂಜರಿಯಲಿಕ್ಕಿಲ್ಲವಾಗಿ ನಂಬುತ್ತೇವೆ.

ಈ ಕೂಟಗಳಲ್ಲಿ ತೀರ್ವೂನಿಸಿದ ಉಳಿದೆರಡು ವಿಷಯಗಳು ಪ್ರಾಮುಖ್ಯತೆಯಲ್ಲಿ ಕಡವೆಯವೇನೂ ಇಲ್ಲ. ಆದರೆ ಅವುಗಳ ವಿಷಯದಲ್ಲಿ ಭಿನ್ನಾಭಿಪ್ರಾಯವು ಎಲ್ಲಿಯೂ ಇರಲಿಲ್ಲ. ರೈತರ ಈ ವರ್ಷದ ಬೆಳೆಯೂ ಮತ್ತು ಬೆಲೆಯೂ ಕಡವೆಯಾಗಿರುವುದರಿಂದ ಕಂದಾಯದ ಮೂರರಲ್ಲಿ ಒಂದು ಭಾಗವನ್ನು ವೂಫಿ ಬಿಡಬೇಕೆಂದೂ, ಕಳೆದ ಎರಡು ವರ್ಷಗಳ ಕಂದಾಯದಲ್ಲಿ ತೋರಿಸಿದ ತಾತ್ಕಾಲಿಕ ರಿಯಾಯಿತಿಯನ್ನು ಖಾಯಂ ವೂಫಿ ಬಿಡಬೇಕೆಂದೂ ಕೇಳುವದು ವ್ಯವಸಾಯಗಾರರ ನ್ಯಾಯವಾದ ಕೋರಿಕೆಯಾಗಿದೆ. ರೈತರ ಆರ್ಥಿಕ ಮುಗ್ಗಟ್ಟಿನ ಕಾಲದಲ್ಲಿ ಸಹಾಯಕ್ಕೆ ಬರಬೇಕಾದದ್ದು ರಾಜಧರ್ವ. ರಾಜರು ತನ್ನ ಧರ್ವವನ್ನು ವರೆತು ಯಾ ಬಿಟ್ಟರೆ ಪ್ರಜೆಗಳ ಸ್ಥಿತಿಯು ಮಿತಿವಿೂರಿ ಕೆಟ್ಟು ಹೋಗಿ ಅವರಲ್ಲಿ ಅತೃಪ್ತಿಯು ಪ್ರಬಲವಾಗುವುದರಲ್ಲಿ ಸಂಶಯವಿಲ್ಲ.

ಎಲ್ಲದಕ್ಕಿಂತಲೂ ಮುಖ್ಯವಾದದ್ದು ಮೂರನೇ ಗೊತ್ತುವಳಿಯಾಗಿದೆ. ಅದು ದೇಶದ ಆಡಳಿತೆಯ ಸುಧಾರಣೆಯನ್ನು ಕುರಿತದ್ದು, ಹಿಂದೂ ದೇಶದ ಬೇರೆ ಎಲ್ಲಾ ಪ್ರಾಂತ್ಯಗಳಿಗೂ, ಅವರಲ್ಲೂ ರಾಜಕೀಯ ವೂರ್ನಾಡಿನ ನಂಟಿಗೆ ಕೊಡಗಿಗಿಂತ ಹಿಂದು ಬಿದ್ದಿದ್ದ ವಾಯವ್ಯ ಗಡೀ ಪ್ರಾಂತ್ಯಕ್ಕೂ ಕೂಡ ಪ್ರಾಂತೀಕ ಸ್ವಾತಂತ್ರ್ಯ ಸರ್ಕಾರದ ರಚನೆಯನ್ನು ವಂಜೂರು ವೂಡಿ, ಅದನ್ನು ನಡಿಸಲು ಹಣ ಸಾಲದಕ್ಕೆ ಮಧ್ಯವರ್ತಿ ಸರ್ಕಾರದಿಂದ ವಾರ್ಷಿಕ ವಂತಿಗೆ ಕೊಡುವಂತೆ ನಿಶ್ಚಯಿಸಿರುವಾಗ್ಗೆ ಕೊಡಗಿಗೆ ಏನೊಂದು ಸುಧಾರಣೆ ಏನ್ನೂ ಕೊಡುವ ಏರ್ಪಾಡು ವೂಡದಿರುವದು ತುಂಬಾ ಅನ್ಯಾಯವಾಗಿದೆ, ಇದರಿಂದ ದೇಶದವರಲ್ಲಿ ಉಂಟಾಗಿರುವ ಅಸವಮಧಾನವು ಅಷ್ಟಿಷ್ಟಲ್ಲ. ಈ ವಿಚಾರದಲ್ಲಿ ದೇಶದಲ್ಲಿ ಅಶಾಂತಿಯು ಹರಡುವ ಮುಂಚೆಯೇ ಸರ್ಕಾರದವರು ಜನರ ನ್ಯಾಯವಾದ ಕೋರಿಕೆಗಳನ್ನು ಸಲ್ಲಿಸಿಕೊಡುವುದು ಬುದ್ಧಿವಂತಿಕೆಯಾಗಿದೆ.

ಸಾರ್ವಜನಿಕ ಸಭೆಗಳು.

ಕೊಡಗು ಜವಿೂನ್ದಾರರ ಸಂಘದ ಆಶ್ರಯದಲ್ಲಿ ಕಳೆದ ಎರಡು ವಾರಗಳಲ್ಲಿ ನಡಿಸಿದಂತೆಯೇ ಕಂದಾಯ ವೂಫಿ, ಭೂಮಿಗಿರ್ವಿ ಬ್ಯಾಂಕು ಮತ್ತು ರಾಜಕೀಯ ಸುಧಾರಣೆಗಳನ್ನು ಕುರಿತ ಈ ಕೆಳಗಿನ ಸ್ಥಳಗಳಲ್ಲಿ ಪಬ್ಲಿಕ್ ಎಂಟಿಂಗುಗಳು ನಡೆಸಲ್ಪಟ್ಟವು ಅಲ್ಲಿ ವಾಸಾದ ತರಾವುಗಳ ಪ್ರತಿಯು ಎಂಟಿಂಗಿನ ಅಧ್ಯಕ್ಷರಿಂದ ಕವಿಷನರವರಿಗೆ ಕಳುಹಿಸಲ್ಪಟ್ಟಿತು.

ನಾಪೋಕ್ಲು

ಈ ತಾರೀಕು 15 ನೇ ಶನಿವಾರ ಮಧ್ಯಾಹ್ನ 2 ಗಂಟೆಗೆ ನಾಪೋಕ್ಲು ಶಾಲಾ ಬಳಿ ವೈದಾನದಲ್ಲಿ ಒಂದು ದೊಡ್ಡ ಸಾರ್ವಜನಿಕ ಸಭೆಯು ಸೇರಿತ್ತು. ಮೆ. ಬಿದ್ದಂಡ ಕಾರ್ಯಪ್ಪನವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಅಧ್ಯಕ್ಷರ ಕೋರಿಕೆಯ ಮೇರೆ ಜವಿೂನ್ದಾರರ ಸಂಘದ ಪ್ರೆಸಿಡೆಂಟರಾದ ಮೆ. ಪಿ. ಐ. ಬೆಳ್ಯಪ್ಪನವರು ಎಂಟಿಂಗಿನ ಉದ್ದೇಶವನ್ನು ಸಂಕ್ಷೇಪವಾಗಿ ಹೇಳಿ ಕೊಡಗಿನಲ್ಲಿ ಪ್ರತ್ಯೇಕವಾಗಿ ಭೂಮಿಗಿರ್ವಿ ಬ್ಯಾಂಕನ್ನು ಸ್ಥಾಪಿಸುವುದರಿಂದುಂಟಾಗುವ ಲಾಭ ನಷ್ಟಗಳನ್ನು ಕುರಿತು ದೀರ್ಘ ಭಾಷಣ ವೂಡಿದರು ನಂತರ ಈ ಕೆಳಗಿನ ತರಾವನ್ನು ಸಭೆಯು ಮುಂದಿಟ್ಟರು.

'ಕೊಡಗಿನಲ್ಲಿ ಪ್ರತ್ಯೇಕ ಭೂಮಿಗಿರ್ವಿ ಬ್ಯಾಂಕನ್ನು ಸ್ಥಾಪಿಸುವುದರ ಬದಲು ಸಹಕಾರಿ ಸೆಂಟ್ರಲ್ ಬ್ಯಾಂಕಿನಲ್ಲೇ ದೀರ್ಘ ಕಂತಿನ ಸಾಲ ಕೊಡುವ ಏರ್ಪಾಡನ್ನು ವೂಡುವುದು ಉತ್ತವವೆಂದು ಈ ಸಭೆಯು ಅಭಿಪ್ರಾಯಪಡುತ್ತದೆ.'

ಮೆ. ಗಳಾದ ಬಿದ್ದಾಟಂಡ ಚಿಂಣಪ್ಪನವರು ಮತ್ತು ಕೋಲೆಯ ಸುಬ್ಬಯ್ಯನವರು ತರಾವಿಗೆ ಒತ್ತಾಸೆಯನ್ನಿತ್ತರು. ತರಾವು ಸರ್ವ ಸವ್ಮತದಿಂದ ವಂಜೂರಾಯಿತು.

ಆ ಮೇಲೆ ಜವಿೂನ್ದಾರರ ಸಂಘದ ಗವುರವ ಕಾರ್ಯದರ್ಶಿಯವರಾದ ಮೆ. ಏನಂಡ ಕಾರ್ಯಪ್ಪನವರು ಕೊಡಗಿಗೆ ಏನೊಂದೂ ರಾಜಕೀಯ ಸುಧಾರಣೆಗಳನ್ನು ಕೊಡಲು ಏರ್ಪಾಡು ವೂಡದೆ ಇರುವುದರ ಅನ್ಯಾಯವನ್ನು ಕುರಿತು ಸ್ವಾರಸ್ಯವಾಗಿ ಉಪನ್ಯಾಸ ವೂಡಿ ಈ ಕೆಳಗಿನ ಗೊತ್ತುವಳಿಯನ್ನು ಸೂಚಿಸಿದರು.

'ಕೊಡಗಿಗೆ ರಾಜಕೀಯ ಸುಧಾರಣೆಗಳನ್ನೇನೂ ಕೊಡಲು ಏರ್ಪಾಡು ವೂಡಿರುವುದು ತುಂಬಾ ಅಸವಮಧಾನಕರ ಮತ್ತು ಅತೃಪ್ತಿಕರ. ಆದುದರಿಂದ ವೂರ್ಣ ಜವಾಬ್ದಾರಿ ಸರ್ಕಾರ ರಚನೆಯನ್ನು ಕೊಡಲು ಕೂಡಲೇ ಏರ್ಪಾಡು ವೂಡುವುದು ಅತ್ಯಗತ್ಯ.'

ಈ ತರಾವು ಯಾರೊಬ್ಬರ ವಿರೋಧವಿಲ್ಲದೆ ವಾಸಾಯಿತು.

ವೆ. ಸಿ ಯಂ ಭೀಮಯ್ಯನವರು—ವೂರ್ತಿ ಕಂದಾಯ ಕೊಡಲು ರೈತರ ಅಶಕ್ತತೆಯನ್ನು ಸಕಾರಣಗಳಿಂದ ಸೂಚಿಸಿ ಭಾಷಣ ವೂಡಿದ ವೇಲೆ ಈ ಕೆಳಗಿನ ತರಾವನ್ನು ಸಭೆಯ ವುಂದಿಟ್ಟರು

'ಈ ವರ್ಷದ ಬೆಳೆ ಫಸಲು ಉತ್ತವವಾಗಿಲ್ಲದ್ದರಿಂದಲೂ, ಬೆಲೆ ಕಡವೆಯಾಗಿರುವುದರಿಂದಲೂ ಈ ವರ್ಷದ ಕಂದಾಯದಲ್ಲಿ ವೂರರಲ್ಲಿ ಒಂದು ಭಾಗವನ್ನು ವೂಫಿ ಬಿಡಬೇಕೆಂದೂ, ಕಳೆದ ಎರಡು ವರ್ಷಗಳಲ್ಲಿ ತೋರಿಸಿದಂಥ ತಾತ್ಕಾಲಿಕ ಕಂದಾಯ ರಿಯಾಯಿತಿಯನ್ನು ಖಾಯಂ ವೂಫಿಬಿಡಬೇಕೆಂದೂ ಈ ಸಭೆಯವರ ಕೋರಿಕೆಯಾಗಿದೆ.'

ಈ ಗೊತ್ತುವಳಿಯು ಏಕವತದಿಂದ ವಂಜೂರಾಯಿತು.

ದೇಶದ ರೈತರ ಹಿತಕ್ಕಾಗಿ ಹಲವು ವರ್ಷಗಳಿಂದ ಪ್ರಯತ್ನಿಸುತ್ತಿರುವ ಜವಿೂನ್ದಾರರ ಸಂಘಕ್ಕೆ ಎಲ್ಲರೂ ಸೇರಿ ಅದರ ಕಾರ್ಯಕಲಾಪಗಳಿಗೆ ಉತ್ತೇಜನ ಕೊಡಬೇಕೆಂತಲೂ, ಇಲ್ಲಿ ವಾಸಾದ ತರಾವುಗಳ ಪ್ರಚಾರವನ್ನು ಗ್ರಾವೂಗಳ ಸಂಘುಗೊಂದುಗಳಲ್ಲಿಯೂ ಹರಡಬೇಕೆಂತಲೂ ವುಂಕಾಗಿ ಅಧ್ಯಕ್ಷರು ಭಾಷಣ ವೂಡಿದ ನಂತರ, ಅಧ್ಯಕ್ಷರಿಗೂ, ಜವಿೂನ್ದಾರರ ಸಂಘದವರಿಗೂ ಮತ್ತು ನೇರೆದಿದ್ದ ಸಭಿಕರಿಗೂ ವಂದನೆಗಳನ್ನರ್ಪಿಸಿದ ವೇಲೆ ಸಭೆಯು ಮುಕ್ತಾಯಗೊಂಡಿತು.

ವೂರ್ನಾಡು

ವೂರ್ನಾಡಿನ ಪಾಂಡಾಣೆಯಲ್ಲಿ ಈ ತಾ. 20ನೇ ಗುರುವಾರ ವುಧ್ಯಾಹ್ನ 2 ಗಂಟೆಗೆ ಒಂದು ಪಬ್ಲಿಕ್ ಎಂಟಿಂಗು ಸೇರಿತ್ತು. ಮೆ. ವುಡೆಯಂಡ ದೇವಯ್ಯನವರ ಸೂಚನೆ ವೇರೆ ಮೆ. ಚಾರಿರ ಅಪ್ಪಯ್ಯನವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಅಧ್ಯಕ್ಷರ ಅನುವತಿಯಂತೆ ಶ್ರೀ ಪಿ. ಐ ಬೆಳ್ಯಪ್ಪನವರು ಸಭೆಯನ್ನು ಕೂಡಿಸಿದ್ದರ ಉದ್ದಿಶ್ಯವನ್ನು ಸುಕ್ಷಿಪ್ತವಾಗಿ ಹೇಳಿ ಭೂಮಿ ಗಿರ್ವಿ ಬ್ಯಾಂಕಿನ ಸಾಧಕ ಬಾಧಕಗಳನ್ನು ಕುರಿತು ಉಪನ್ಯಾಸ ವೂಡಿದರು. ನಂತರ ಈ ವಿಚಾರವನ್ನು ಕುರಿತು ನಾವೋಕ್ಲು ಎಂಟಿಂಗಿನಲ್ಲಿ ವಾಸಾವಂತಾ ಗೊತ್ತುವಳಿಯನ್ನು ಸೂಚಿಸಿದರು. ಪ್ರತ್ಯೇಕ ಭೂಮಿ ಗಿರ್ವಿ ಬ್ಯಾಂಕು ಅಗತ್ಯವೆಂದು ಹೇಳುತ್ತಾ ತರಾವನ್ನು ವಿರೋಧಿಸಿ ಮೆ. ಕೆಂಬಡಕಂಡ ವೊಣಪ್ಪನವರು ಮತ್ತು ವೆ. ತೆಕ್ಕಡ ಅನಂದಯ್ಯನವರು ಭಾಷಣ ವೂಡಿದರು. ಮೆ. ಗಳಾದ ಬೊಳ್ಳಜೆಟ್ಟಿರ ಅಚ್ಚಯ್ಯನವರು, ಮೆ ಚಂಗಂಡ ಕುಂಞಪ್ಪನವರು ಮತ್ತು ವುಡೆಯಂಡ ದೇವಯ್ಯನವರು ತರಾವಿಗೆ ಒತ್ತಾಸೆಯಾಗಿ ವೂತಾಡಿದರು. ವಿರೋಧಿಸಿದವರಿಗೆ ಮೆ. ಬೆಳ್ಯಪ್ಪನವರು ಉತ್ತರವಿತ್ತ ವೇಲೆ ತರಾವು. ದೊಡ್ಡ ಬಹುಮತದಿಂದ ವಾಸಾಯಿತು, ಇಬ್ಬರು ವಿರೋಧವಾಗಿಯೂ, ಒಬ್ಬರು ಯಾವ ಕಡೆಗೂ ಇಲ್ಲದೆಯೂ, ಉಳಿದವರೆಲ್ಲರೂ ಪರವಾಗಿಯೂ ಓಟು ಕೊಟ್ಟರು.

ಆ ಮೇಲೆ ಜವಿೂನ್ದಾರರ ಸಂಘದ ಅಧ್ಯಕ್ಷರು ಕಂದಾಯ ವೂಫಿಯನ್ನು ಮತ್ತು ರಾಜಕೀಯ ಸುಧಾರಣೆಗಳನ್ನು ಕುರಿತ ತರಾವುಗಳನ್ನು ವೇಲೆ ಕಾಣಿಸಿದ ರೂಪುರೇಷೆಯಲ್ಲಿಯೇ ಸಭೆಯು ಮುಂದಿಟ್ಟರು ಇವೆರಡು ಗೊತ್ತುವಳಿಗಳೂ ಸರ್ವ ಸವ್ಮತದಿಂದ ವಂಜೂರಾದವು. ಮೆ. ವುಡೆಯಂಡ ದೇವಯ್ಯನವರು ಜವಿೂನ್ದಾರರ ಸಂಘದ ಪ್ರೆಸಿಡೆಂಟರಿಗೂ, ಎಂಟಿಂಗಿನ ಅಧ್ಯಕ್ಷರಿಗೂ, ಸಭೆ ನೆರೆದಿದ್ದ ವಹನೀಯರಿಗೂ ವಂದನೆಗಳನ್ನರ್ಪಿಸಿದ ನಂತರ ಎಂಟಿಂಗು ಬರಕಾಸ್ತಾಯಿತು.

ನಾಪೋಕ್ಲು ಗವರ್ನವೆಂಟು ವೂಡಲ್ ಶಾಲೆಯ ವುಣಿನುಹೋತ್ಸವದ ಕಾಣಿಕೆ.

ಕಥೆ ನೊದಲಾದ ವಿವಿಧ ಲೇಖನಗಳಿಂದಲೂ ಶಾಲೆಯ ಚಟುವಟಿಕೆಗಳ ವಿಷಯಗಳಿಂದಲೂ ಕೂಡಿದ ಪುಸ್ತಕ ಕೊಡಗಿನ ಪ್ರತಿಯೊಬ್ಬ ವಹನೀಯರೂ ಸಂಗ್ರಹಿತಕ್ಕ ಪುಸ್ತಕ.
ಅಸರೂಪದ ಪುಸ್ತಕ. ಬೆಲೆ ಆಣೆ 0—2—0 ವೂತ್ರ

ಖರ್ಚು ಕಳೆದು ಉಳಿಕೆಯಾದ ಹಣವೆಲ್ಲವೂ ಶಾಲೆಯ ಬಡ ಹುಡುಗರ ಫಂಡಿಗೆ ಸೇರುತ್ತದೆ.

ಪುಸ್ತಕ ದೊರೆಯುವ ಸ್ಥಳ:—

ಕಾರ್ಯದರ್ಶಿ, ಬಾಲಕರ ಸಹಕಾರ ಸ್ಟೋರ್ಸ್, ಲಿಮಿಟೆಡ್, ನಾಪೋಕ್ಲು.

ಏಜೆಂಟರು, 'ವಿಶ್ವಕರ್ನಾಟಕ', ವುಡಿಕೇರಿ

ಜಿಲ್ಲಾ ದೇಶ.

ಕಳೆದ ವಾರ ಫೋಜರ್‌ಪೇಟೆಯಲ್ಲಿ ಒಬ್ಬರಿಗೆ ಹೊಸದಾಗಿ ಸ್ಟೇಗು ಆಂಟಿತೆಂದು ವರ್ತಮಾನ.

ಕೊಡಗು ಸಹಕಾರಿ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಎಲೆಟಿಂಗು ಈ ತಾರೀಕು 29ನೇ ಶನಿವಾರ ಬೆಳಿಗ್ಗೆ 11 ಗಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ನಡೆಯುವುದು.

ಹಲವು ವರ್ಷಗಳಿಂದ ಮಡಿಕೇರಿಯಲ್ಲಿ ಪೂತಕಾಲು ಅಂಗಡಿ ಇಟ್ಟುಕೊಂಡಿದ್ದ ಮೆ. ಕೊಗ್ಗಪ್ಪೆಯವರು ಈ ತಾರೀಕು ರಲ್ಲಿ ಅವರ ಊರಾದ ಪುಕ್ಕೊರಿನಲ್ಲಿ ಶಿವಾಧೀನರಾದರೆಂದು ಬರುತ್ತೇವೆ.

ಈ ತಾ. 24ನೆ ಸೋಮವಾರ ಕೊಡಗು ನ್ಯಾಯ ಬೋಧಕ ಸಭೆಯ ಎಲೆಟಿಂಗಿಗಾಗಿ ಚೀಫ್ ಕಮಿಷನರವರು ಈ ತಾರೀಕು 20ನೆ ಸಾಯಂಕಾಲ ಬೆಂಗಳೂರಿನಿಂದ ಮಡಿಕೇರಿಗೆ ಆಗಮಿಸಿದರು.

ಈ ವಾರ ಗೋಣಿಕೊಪ್ಪಲಲ್ಲಿ ಭತ್ತ ಗಾಡಿಯೊಂದಕ್ಕೆ ರೂ. 37—8—0, ಮಡಿಕೇರಿಯಲ್ಲಿ ಕಾಫಿ ಖಂಡಿಗೆ ರೂ. ಮತ್ತು ಯಲಕ್ಕಿ ಮಣಕ್ಕೆ ರೂ. 30 ಕ್ರಯವಿತ್ತೆಂದು ಯಬರುತ್ತದೆ.

ಶಾಲಾ ಇನ್‌ಸ್ಪೆಕ್ಟರಾಗಿದ್ದ ಮೆ. ಯಫ್. ಯಫ್ ಎ ಮಂಡ್ಸ್‌ರವರು ರಜೆ ತೆಗೆದುಕೊಂಡಿರುವದರಿಂದ ಅವರ ಬದಲು ಇನ್‌ಸ್ಪೆಕ್ಟರಾಗಿರುವ ಮೆ. ಥಾಮ್‌ಸನ್‌ರವರು ಕೊಡಗು ನ್ಯಾಯವಿಧಾಯಕ ಸಭೆಯ ಮೆಂಬರಾಗಿ ನೇಮಿಸಲ್ಪಟ್ಟಿರುವರು.

ಮಡಿಕೇರಿ ಸಿದ್ದಾಪುರ ರಸ್ತೆಯ 8ನೇ ಮೈಲು ಕಲ್ಲು ಬಳಿ ಇದ್ದ ಒಬ್ಬ ಕೈಸ್ಥಾನನ್ನು ಕೆಲವು ದಿವಸಗಳ ಹಿಂದೆ ಕೊಲೆ ಮಾಡಿದ ಕೇಸಿನಲ್ಲಿ ಪಾಲೆ ಅಂಗಡನೆಂಬವನು ಸೆಷನ್ಸ್ ಕೋರ್ಟಿನ ವಿಚಾರಕ್ಕೆ ಗುರಿಮಾಡಲ್ಪಟ್ಟಿದ್ದನು. ಕಳೆದ ವಾರ ಆ ಕೇಸಿನ ವಿಚಾರವನ್ನು ಮುಗಿಸಿ ಸೆಷನ್ ಜಡ್ಜರು ಅಂಗಡನು ತಪ್ಪಿತಸ್ಥನಲ್ಲವೆಂದು ತಾರೀಕು 15ನೆ ಅವನನ್ನು ಬಿಡುಗಡೆ ಮಾಡಿದರು.

ಕೊಡಗಿನಲ್ಲಿ ದೊರೆಯುವ ಜೇನು ಮತ್ತು ವೇ.ಣಕ್ಕೆ ಉತ್ತಮವಾದ ಬೆಲೆ ದೊರೆಯುವಂತೆ ಹೊರ ಪ್ರಾಂತ್ಯಗಳಲ್ಲಿ ವ್ಯಾಪಾರ ಮಾಡುವ ಉದ್ದಿಶ್ಯ ವೀರಾಜಪೇಟೆ ಕೇಂದ್ರಸ್ಥಾನವಾಗಿ ಒಂದು ಸಹಕಾರಿ ಸಂಘವು ರಿಜಿಸ್ಟರು ಮಾಡಲ್ಪಟ್ಟಿದ್ದು ಈ ತಾ. 14ನೆ ಅದರ ಪ್ರಥಮ ಜನರಲ್ ಎಂಟಿಂಗು ವೀರಾಜಪೇಟೆಯಲ್ಲಿ ನಡೆಯಿತು.

ಕೊಡಗಿನಲ್ಲಿರುವ ಜಿನಸು ಮತ್ತು ದವಸ ಸಹಕಾರಿ ಸೊಸೈಟಿಗಳಿಗೆ ಹೊರ ಪ್ರಾಂತ್ಯಗಳಿಂದ ಸಾಮಾನುಗಳನ್ನು ತರಿಸಿ ಕೊಡಲು ಒಂದು ಮಧ್ಯವರ್ತಿ ಸೊಸೈಟಿ, ವೀರಾಜಪೇಟೆಯಲ್ಲಿ ಸ್ಥಾಪಿಸಲ್ಪಟ್ಟಿದೆ ಅದರ ಪ್ರಥಮ ಜನರಲ್ ಎಂಟಿಂಗು ಈ ತಾರೀಕು 14ನೆ ನಡೆದು ಕಾರ್ಯಕಾರಿ ಮಂಡಳಿಯ ಚುನಾವಣೆಯಾಯಿತು.

ಸಿ. ಪಿ. ಸಿ ಬಸ್ಸ್ ಸರ್ವಿಸಿನ ಡ್ರೈವರಾಗಿದ್ದ ಮೆ. ಮಣವಟ್ಟಿರ ಬೋಪಯ್ಯನವರ ಬಸ್ಸು ತಾ. 13ನೆ ಮಂಗಳೂರಿನಿಂದ ಮಡಿಕೇರಿಗೆ ಬರುತ್ತಿದ್ದಾಗ್ಯೆ ಕಾವು ಬಳಿ ನಿಷ್ಠಾ ಸೇವನೆ ಮಾಡಿದ್ದ ಒಬ್ಬ ಮುದುಕಿಗೆ ತಗಲಿ ಅವಳಿಗೆ ಜಖಂ ಆಗಿತ್ತೆಂತಲೂ, ಮಂಡಿನ ಬೋಪಯ್ಯನವರು ತನ್ನ ಹೆಂಡತಿ ಮಕ್ಕಳನ್ನು ಅವಳ ತವರು ಮನೆಯಾದ ನೆಲಜಿ ಮುಂಡಂಡ ಮನೆಗೆ ಕರೆದುಕೊಂಡು ಹೋಗಿ ಅಲ್ಲಿ ತಾರೀಕು 16ರ ರಾತ್ರಿ ಅವರು ಗುಂಡುಹೊಡೆದುಕೊಂಡು ಆತ್ಮಹತ್ಯ ಮಾಡಿಕೊಂಡರೆಂತಲೂ ತಿಳಿಯುತ್ತೇವೆ.

ಅನ್‌ರಿಡೀಮ್ಡ್ ಜಾಗದಲ್ಲಿರುವ ಗಂಧದ ಮರಗಳಿಗೆ ಬೋನಸು ಕೊಡುವದನ್ನು ಕುರಿತ ಕರಡು ನಿಬಂಧನೆಗಳ ತಿದ್ದುಪಡಿಯ ವಿಷಯ ಮೂತಾತಿಲು ಜಮೀನ್ದಾರರ ಸಂಘದ ಒಂದು ಡೆಪ್ಯುಟೇಶನಿಗೆ ಅವಕಾಶ ಕೊಡಬೇಕೆಂದು ಆ ಸಂಘದ ಕಮಿಟಿಯ ತೀರ್ಮಾನದಂತೆ ಸೆಕ್ರೆಟರಿಯವರು ಕಮಿಷನರವರಿಗೆ ಬರೆದಿದ್ದ ಪತ್ರಕ್ಕೆ—'ಈ ವಿಷಯ ಬರುವ ಕೌನ್ಸಿಲು ಎಂಟಿಂಗಿನಲ್ಲಿ ಚರ್ಚಿಸಲ್ಪಡುವದು; ಅಲ್ಲಿಯ ಚರ್ಚೆಯು ಮುಗಿಯುವ ವರೆಗೆ ಡೆಪ್ಯುಟೇಶನ್ ಬರುವುದು ಪ್ರಯೋಜನವಾಗಲಾರದೆಂದು' ಕಮಿಷನರವರ ಜವಾಬು ಬಂದಿದೆಯೆಂದು ತಿಳಿಯುತ್ತೇವೆ.

ಹಿಂದೂದೇಶ.

ರಾಜಕೀಯ ಬಂದಿಗಳ ವಿಷಯದಲ್ಲಿ ಆಲೋಚಿಸಿ, ಅವರ ಬಿಡುಗಡೆಗಾಗಿ ಪ್ರಯತ್ನಿಸಲು ಕಾಂಗ್ರೆಸಿನ ಕಡೆಯಿಂದ ಒಂದು ಕಮಿಟಿ ನೇಮಕವಾಗಿದೆ.

ದಿವಂಗತ ಚಕ್ರವರ್ತಿಗಳಾದ ಐದನೆಯ ಜಾರ್ಜರ ಒಂದು ಪ್ರತಿಮೆಯನ್ನು ಯೋಗ್ಯ ಸ್ಥಳದಲ್ಲಿ ಸ್ಥಾಪಿಸಬೇಕೆಂದು ದಿಲ್ಲಿ ಮುನಿಸಿಪಾಲಿಟಿ ನಿರ್ಧರಿಸಿದೆ.

ಬೋಗ್ರಾ, ಧುಬ್ರಿ, ಪಾಟ್ನಾ, ಕಾಶಿ, ಮುಜಫರಪುರ್ ಮೊದಲಾದ ಕಡೆಗಳಲ್ಲಿ ಪುನಃ ಭೂಕಂಪ! ಭಾಗಲ್ಪುರದಲ್ಲಿ ಒಂದು ಗೋಡೆ ಬಿದ್ದು ಇಬ್ಬರು ಸತ್ತರು.

ಹೊಸ ಶಾಹಿದ್‌ಗಂಜ್ ಜಿಲ್ಲೆಯಲ್ಲಿ ಡಿಕ್ಟೇಟರುಗಳಾದ ಎಸ್‌ಪಿಲಾಬಕ್ಸ್ ಮತ್ತು ಯಶುಪಾಲ್ ಹಸನ್ ಎಂಬ ಇಬ್ಬರಿಗೆ ತಲಾ 6—6 ತಿಂಗಳ ಕಠಿನ ಸಜೆ ವಿಧಿಸಲಾಗಿದೆ.

ಬರುವ ಬಜೆಟಿನಲ್ಲಿ ಉಳಿತಾಯವಾಗುವ ಸಂದರ್ಭದಲ್ಲಿ, ಅರ್ಧಾಣೆಯ ಕಾರ್ಡು, 1 ಆಣೆಯ ಕವರುಗಳನ್ನು ಜಾರಿಗೆ ತರಬೇಕೆಂದು, ಕರಾಚಿ ಹಿಂದೀ ವರ್ತಕ ಸಂಘವು ಇಂಡಿಯಾ ಸರಕಾರಕ್ಕೆ ಸೂಚಿಸಿದೆ.

ಆಂಧ್ರ ಪ್ರಾಂತದ ಎಲ್ಲೂರೂ, ಗುಂಟೂರು, ಆದವಾನಿ, ನರಸಾಪುರ ಮೊದಲಾದ ಕಡೆಗಳಲ್ಲಿ ವಿಪರೀತ ಮಳೆ, ಬಿರುಗಾಳಿಗಳಿಂದ ವಿಪರೀತ ಅನರ್ಥವಾಗಿದೆ ಮಂಗಳು ಉರುಳಿದುವು. ಬೆಳೆಗೆ ಬಹಳ ನಷ್ಟ ಸಂಭವಿಸಿತು. ಮರ ಬಿದ್ದು ಒಬ್ಬ ಗ್ರಾಮಸ್ಥ ಸತ್ತ. ಎಷ್ಟೋ ಹಕ್ಕಿ ಪಕ್ಷಿಗಳೂ ಮೃತವಾದುವು. ಆದವಾನಿ ಪ್ರಾಂತದಲ್ಲಿ ಕಿತ್ತಳೆಯಷ್ಟು ದೊಡ್ಡ ಆಣೆಕಲ್ಲುಗಳು ಬಿದ್ದಿವೆ ಎಂದು ವಾರ್ತೆ.

'ಈ ಯುದ್ಧ ಮುಗಿದ ಮೇಲೆ ಶಿಕ್ಷಣಕ್ಕಾಗಿ ಅಬಿಸೀನಿಯದ ಹುಡುಗಂನ್ನು, ಇಂಡಿಯಕ್ಕೆ ಕಳುಹಿಸಬೇಕೆಂಬ ಆತುರ ನಮಗಿದೆ. ಇಂಡಿಯವು ಇತಿಯೋಪಿಯಕ್ಕೆ ರೆಡ್ ಕ್ರಾಸಿನ ಸಹಾಯವೊಡಲಿ; ಇಟಲಿಯ, ಮೇಲಿನ ಬಹಿಷ್ಕಾರ ಶಾಸ್ತ್ರವನ್ನು ಇಂಡಿಯವು ತೀಕ್ಷ್ಣ ರೀತಿಯಿಂದ ಪ್ರಯೋಗಿಸಲಿ' ಎಂದು ಅಬಿಸೀನಿಯಾ ಚಕ್ರವರ್ತಿಯವರು, ಲಾಹೋರಿನ 'ಟ್ರಿಬ್ಯೂನ್' ಪತ್ರಿಕಾಪ್ರತಿನಿಧಿಗಳೊಡನೆ ಅಪ್ಪಣೆ ಕೊಡಿಸಿರುವುದಾಗಿ ಪ್ರಕಟವಾಗಿದೆ.

ವಿದೇಶ.

ನಮ್ಮ ಹೊಸ ಚಕ್ರವರ್ತಿಗಳು ಇನ್ನೂ ಮದುವೆಯಾಗಿರುವದಿಲ್ಲ. ಅವರ ಮದುವೆ ಇದೇ ಮೇಯಿಂದ ಜುಲೈ ಅತ್ಯದೊಳಗೆ ನಿರವೇರುವುದೆಂದು ಪಂಡಿತ ಸೂರ್ಯನಾರಾಯಣ ವ್ಯಾಪಾರ ಭವಿಷ್ಯ.

ಇತೋಪಿಯದ ಹಲವು ಮಂದಿ ಪಾಳೆಯಗಾರರು ತಮ್ಮ ಸ್ವಾಧೀನವಿದ್ದ ಯಾವತ್ತೂ ಭೂಗಾರವ ವಸ್ತ್ರ, ಬೆಳ್ಳಿಯ ಆಭರಣಗಳನ್ನು ಅಬಿಸೀನಿಯಾ ಚಕ್ರವರ್ತಿಗಳಿಗೆಒಪ್ಪಿಸಿ ತಮ್ಮ ರಾಜಭಕ್ತಿಯನ್ನು ಪ್ರದರ್ಶಿಸಿದರು.

ಶಾಂಗ್‌ಹಾಯ್ ಪ್ರಾಂತ್ಯದಲ್ಲಿ ಧೈರ್ಯಶಾಲಿನಿಯೂದ ಒಬ್ಬ ಚೀನಾ ಸುಂದರಿಯು ಅಲ್ಲಿನ ಸರಕಾರದ ವಿರುದ್ಧವಾಗಿ 2 ಸಾವಿರ ಕಮ್ಯುನಿಸ್ಟ್ ಸೈನಿಕರನ್ನು ಕಟ್ಟಿಕೊಂಡು ತಾನೇ ಸೇನಾನಾಯಕಿಯಾಗಿ ಸರ್ಕಾರವನ್ನು ತೆಲ್ಲಣಗೊಳಿಸಿರುವಳು.

ಜಿನೇವದ ಎಂಜಿ ಸ್ಯಾಂಕ್ಷನಿನ ಕಮಿಟಿಯು ವಂದಿ ಪ್ರಕಟವಾಗಿದೆ. ಈ ಬಹಿಷ್ಕಾರಕ್ಕೆ ಅಮೇರಿಕದ ಸಹಾಯವಿಲ್ಲದೆ ಆಗದ; ಇದು ಜಾರಿಗೆ ಬರಲು ಮೂರುವರೆ ತಿಂಗಳು ಬೇಕು ಎಂಬುದು ವಂದಿಯ ಸಾರಾಂಶ. ಇನ್ನು ಈ ಕಮಿಟಿಯ ತೀರ್ಮಾನ ಬರುವ ತಿಂಗಳ ಅವಧಿಯಲ್ಲಿ ಹೊರಬೀಳುವದು

ಯುದ್ಧ ವಾರ್ತೆ.

ಫೆಬ್ರವರಿ ತಾ. 13

ಕೋಬ್ಬೋ ಮೇಲೆ ಬಾಂಬು.

ಕೋಬ್ಬೋ ಎಂಬಲ್ಲಿ ಇಟಲಿಯ ವಿಮಾನಗಳು ಬಾಂಬುಗಳನ್ನು ಎಸೆದವು, ಆದರೆ ಹೆಚ್ಚಿನ ನಷ್ಟಗಳೇನೂ ಆಗಿರುವುದಿಲ್ಲ.

ಕ್ಯೂರಟಿ ಎಂಬಲ್ಲಿ ಯುದ್ಧ.

ಕ್ಯೂರಟಿ ಎಂಬಲ್ಲಿ ಇತೋಪಿಯದ ನಾಯಕರಾದ ನಾಸೀಬುರನರ ದಳಕ್ಕೂ ಯುದ್ಧವಾಗಿ ಸುಮಾರು 300 ಮುಂದಿ ಇಟಲಿಯನ್ ಸೈನ್ಯವಲಿಗಳು ಮೃತರಾದರಲ್ಲದೆ ಅನೇಕ ಕೋವಿ ತೋಟಾಗಳು ಅಬಿಸೀನಿಯರ ಕೈವಶವಾಯಿತೆಂದು ಒಂದು ಪ್ರಕಟಣೆ.

ಸ್ತ್ರೀಯರು ಸೈನಿಕರಾಗಿ,

ಟಿಬಿಯನ್ ಪ್ರಾಂತ್ಯದ ಸಾಹಸ್ರದಗಳ ರಣಾಂಗಕ್ಕೆ ಹೋಗುವ ಸೈನ್ಯದಲ್ಲಿ ಶೇ ಕಡ 10 ರಷ್ಟು ಸ್ತ್ರೀಯರು ಸೈನಿಕರ ಉಡುಪಿನಲ್ಲಿರುವರೆಂದು ತಿಳಿಯಲಾಗಿದೆ.

ಫೆಬ್ರವರಿ ತಾ. 14.

ಇಟಾಲಿಯನರ ವೀರತ್ವ.

ಇಟಲಿಯ ವಿಮಾನಗಳು ಈಗ ಗ್ರಾಮವಾಸಿಗಳನ್ನು ಗ್ರಾಮಗಳಲ್ಲಿನ ದನಕರುಗಳ ಗುಂಪುಗಳನ್ನೂ ಚಿಕ್ಕ ಮಕ್ಕಳ ತಂಡಗಳನ್ನೂ ಕಂಡ ಕಂಡಲ್ಲಿ ಬಾಂಬಿನಿಂದ ಧ್ವಂಸಗೈಯ್ಯುತ್ತಿರುವರೆಂದೂ ಇದೇ ಇಟೇಲಿಯನರ ವೀರತ್ವವೆಂದೂ ಅಬಿಸೀನಿಯದ ಪ್ರಕಟಣೆ,

ಫೆಬ್ರವರಿ ತಾ. 15.

ಕಾನ್ವೆಂಟಿನ ಮೇಲೂ ಬಾಂಬು,

ಲೇಕ್ ಹೈಕ್ ಎಂಬಲ್ಲಿ ಇಟಲಿಯ ವಿಮಾನಗಳು ಒಂದು ಕಾನ್ವೆಂಟಿನ ಮೇಲೆ ಬಾಂಬು ಹಾಕಿದವು. ಆದರೆ ದೈವವಶಾತ್ ಹಾನಿಯೇನೂ ಆಗಿರುವದಿಲ್ಲ.

ಇತೋಪಿಯೂದಲ್ಲಿ ಬಾರಿ ಮಳೆ.

ತಾರೀಕು 15ರಿಂದ ಬಾರಿ ಮಳೆ ಪ್ರಾರಂಭವಾಗಿದೆ. ಅಡ್ಡಿಸ್ ಅಬಾಬದಲ್ಲಿ ಒಂಬತ್ತು ಗಂಟೆಗಳ ವರೆಗೆ ವಿಪರೀತ ಮಳೆ ಬಿದ್ದು ರಸ್ತೆಗಳೆಲ್ಲವೂ ಬಂದಾಗಿದೆ

ಫೆಬ್ರವರಿ ತಾ. 16.

ಎಂಡರ್ಟಾ ಎಂಬಲ್ಲಿ ಭಯಂಕರ ಕದನ,

ಫೆಬ್ರವರಿ ತಾ 10 ರಲ್ಲಿ ಎರಿಟ್ರಿಯನ್ ಸಂಗಡ್ಡಿನಲ್ಲಿ ಇಟಲಿಯ ಸೈನಿಕರಿಗೂ ಅಬಿಸೀನಿಯರಿಗೂ ಭಾರಿ ಕದನವಾಗಿ ಇಟಲಿಯನರು ಅಂಬ ಅರಡರ್ ಎಂಬ ಮುಖ್ಯ ಪರ್ವತವನ್ನು ಕೈವಶ ಮಾಡಿರುವರು. ಈ ಕದನವು ತಾ, 15 ರ ವರೆಗೆ ನಡೆದು ಅದರಲ್ಲಿ 500 ಇಟಲಿ ಸೈನಿಕರು ಮಡಿದರು, ಸುಮಾರು 5000 ಅಬಿಸೀನಿಯರು ಮಡಿದಿರುವರೆಂದೂ ಹೇಳಲಾಗಿದೆ,

---

ಆದಿಶ್ರೀ ಕಾವೇರಿ ಬಸ್ಸ್ ಸರ್ವಿಸ್ ಲಿಮಿಟೆಡ್, ಮಡಿಕೇರಿ.

ಮೇಲ್ಕಂಡ ಕಂಪೆನಿಯಿಂದ ಶೇರು ಹೊಂದಿಕೊಂಡ ವಹನೀಯರುಗಳು.

(ಮುಂದುವರಿದದ್ದು)

ಮು. ರಾ. ಕೆ. ಐ ಜೋಸೆಪ್ ಎಂ. ಎ. ಬಿ. ಎಲ್.	10	ಶೇರು
,, ಎ ಎಸ್ ರಾಮಯ್ಯ ಬಿ. ಎ ಬಿ. ಎಲ್,	10	,,
,, ಕೇತಿಯಂಡ ಮೊಣ್ಣಪ್ಪನವರು	10	,,
,, ಬಿದ್ದಂಡ ಬೆಳ್ಯಪ್ಪನವರು	100	,,
,, ಕುಟ್ಟಂಡ ಮುತ್ತಣ್ಣನವರು	5	,,
,, ಬಿಟ್ಟಿಯಂಡ ಉತ್ತಯ್ಯನವರು	1	,,
,, ಬಿಟ್ಟಿಯಂಡ ಕಾರ್ಯಪ್ಪನವರು	10	,,
,, ಪಾಂಡಂಡ ಬಿ. ಸೋಮಪ್ಪನವರು	30	,,
,, ನೆಲ್ಲಮಕ್ಕಡ ಅಚ್ಚಪ್ಪನವರು	50	,,
,, ಅಮ್ಮಣ ಕುಟ್ಟಂಡ ಚಂಗಪ್ಪನವರು	1	,,
,, ಪಾಂಡಂಡ ಮುದ್ದಪ್ಪನವರು	5	,,
,, ಬಾಣಿಟ್ಟಿರ ಅಪ್ಪಯ್ಯನವರು	4	,,
,, ಜೋಯಿಪರೆ ಪಕ್ಕುಕಾಕನವರು	1	,,
,, ತೆಕ್ಕಡ ಪೂವ್ವಯ್ಯನವರು	1	,,
,, ಪುತ್ತರಿರ ತಿಮ್ಮಯ್ಯನವರು	1	,,
,, ಮುಲ್ಲಂಗೋಡ ಕಾರ್ಯಪ್ಪನವರು	1	,,
,, ಮಿಸೆಸ್ ಕಾಡ್ಯಮಾಡ ಚಂಗಪ್ಪ ಗಂಗಮ್ಮನವರು	1	,,
,, ಅಜ್ಜಮಾಡ ಬೆಳ್ಯಪ್ಪನವರು	1	,,
,, ಮಹಮ್ಮದ್ ಸೇಕ್‌ಹಮ್ಮದ್‌ರವರು	1	,,
,, ಬಲ್ಯಮಾಡ ಚಿಂಣಪ್ಪನವರು	1	,,
,, ಚೇಂದ್ರಿಮಾಡ ಉತ್ತಯ್ಯನವರು	1	,,
,, ಸೈಯದ್ ಬಪ್ಕೋದೀನ್‌ರವರು	1	,,
,, ಯಂ. ಎ. ಹಮೊದ್‌ಖಾನ್‌ರವರು	1	,,
,, ಕೊಂಗಟ್ಟಿರ ಬಿ. ಸುಬ್ಬಯ್ಯನವರು	2	,,
,, ಕೊಂಗಟ್ಟಿರ ಬಿ ಮುದ್ದಪ್ಪನವರು	2	,,
,, ಬಲ್ಲಾರಂಡ ಕೆ. ಅಪ್ಪಯ್ಯನವರು	1	,,
,, ವಿ. ಆರ್. ಚನ್ನಬಸಪ್ಪನವರು.	1	,,

ತಿದ್ದುಪಡಿ:—ಪೃಥಮ ಪ್ರಕಟವಾದ ಪಟ್ಟಿಯಲ್ಲಿ ಮೆ. ಐಚೆಟ್ಟಿರ ಸಿ. ಬೋಪಯ್ಯನವರದು 2 ಶೇರೆಂದು ಪ್ರಕಟವಾದ್ದು ತಪ್ಪು. ಅವರದು 5 ಶೇರಾಗಿದೆ.

ಯು ಯಂ. ಅಂಚಯ್ಯ,
8—4 ಸೆಕ್ರೆಟರಿ.

ಪ್ರಕಟಣೆ.

ಸಿದ್ದಾಪುರದ ವರ್ನಂದಿ ರಸ್ತೆಯಿಂದ ಸುಮಾರು 1½ ಮೈಲು ದೂರದಲ್ಲಿ ಸರಿಯಾಗಿ ಗಾಡಿ ತಿರುಗುವ ರಸ್ತೆ ಬಳಿಯಲ್ಲಿ 25 ಎಕ್ರೆ ಕುತ್ತಿಕಾಣಿ ಕಟ್ಟದ (ರೀಡಿವ್ಡ್) ಕಾಡು, ತೋಟ ಮಾಡಲು ಕಾಡು ಕಡಿದು ಸಾಫೆಗೆ ಅಯುಕ್ತವಾದ ಸಾವಿರಾರು ಮರಗಳನ್ನು ಕೆಡವಿ ಹಾಕಲ್ಪಟ್ಟಿರುತ್ತೆ. ಸಾಫೆ ಕಾಯಕ್ಕೆ ತೆಗೆದು ಮಾರಲು ಖಾಯಿಸಿ ಇರುವವರು ದಯವಿಟ್ಟು ಕೆಳಗಿನ ವಿಳಾಸದವರನ್ನು ಕಂಡು ಅಥವಾ ಬರೆದು ಕೇಳಿದಲ್ಲಿ ಎಲ್ಲಾ ಸಂಗತಿ ತಿಳಿಯುವುದು, ಅನೇಕ ವಣಗಿದ ಮರಗಳೂ ಸಾವಿರಾರು ಹಸಿ ಮರಗಳೂ ಸಾಗಿಸಲು ತಯಾರಾಗಿವೆ,

ಕೆ. ಬಿ. ಕಾರ್ಯಪ್ಪ,
ಚಾರ್ಲೆಟ್ಟ್ ತೋಟ, ಸಿದ್ದಾಪುರ.

ಬೇಕಾಗಿದ್ದಾರೆ.

ಕಿಗ್ಗಟ್ಟುನಾಡು ಕ್ರಾಪ್, ಲೋನ್ ಸೇಲ್ ಅಂಡ್ ಸಪ್ಲೈ ಸಂಘಕ್ಕೆ ಒಬ್ಬ ಮೇನೇಜರು ಬೇಕಾಗಿದೆ.

ಅವರು ಎಸ್. ಎಸ್. ಎಲ್. ಸಿ. ಮುಗಿಸಿರಬೇಕು. ಬುಕ್ಕ್ ಕೀಪಿಂಗ್ ಗೊತ್ತಿದ್ದರೆ ಉತ್ತಮ. ನಗದು ಮತ್ತು ಪಾತರ್ ಜಾಮೀನು ಕೊಡಬೇಕಾಗಿದೆ. ಅರ್ಜಿಗಳು ಈ ತಿಂಗಳ ಆಖೈರು ಒಳಗೆ ತಲಪತಕ್ಕದ್ದು.

ಹೆಚ್ಚಿನ ವಿಷಯಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆಯತಕ್ಕದ್ದು.

ಗೌ ಕಾರ್ಯದರ್ಶಿ.
ಕಿಗ್ಗಟ್ಟುನಾಡು ಕ್ರಾಪ್, ಲೋನ್ &
ಸಪ್ಲೈ ಸಂಘ,
19—2—36, ಪೊನ್ನಂಪೇಟೆ

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ]

ಮಡಿಕೇರಿಯಲ್ಲಿ ಬೆಂಚು ಕೋರ್ಟು ಅಗತ್ಯವೆ ?

ಕೊಡಗಿನ ಮುಖ್ಯ ಪಟ್ಟಣವಾದ ಮಡಿಕೇರಿಯಲ್ಲಿ ಮುಖ್ಯ ಮುಖ್ಯ ಕೋರ್ಟುಗಳು ಇದ್ದೂ ಬೆಂಚು ಕೋರ್ಟಿನ ಅವಶ್ಯಕತೆ ಇದೆಯೋ ಎಂಬುದು ಮೊದಲನೇದು. ಇರುವುದಾದರೆ ಬೆಂಚು ಕೋರ್ಟು ನ್ಯಾಯಾಧೀಶರು ಕಾನೂನು ಸಮ್ಮತವಾದ ತೀರ್ಮಾನವನ್ನು ಕೊಡಲು ಸಮರ್ಥರೇ ಎಂಬುದು ಎರಡನೇಯದು. ಏಕೆಂದರೆ ಇವರು ಯಾವದೇ ಮೊಖದಮ್ಮೆಗಳನ್ನು ಮನಸೋಇಚ್ಛೆ ನಡೆಸಿ ನ್ಯಾಯವಾದ ತೀರ್ಪನ್ನು ಕೊಡಲಿಕ್ಕಾಗುವುದಿಲ್ಲ. ಇವರು ಬಟ್ಟಿಚಾಕರಿ ಮಾಡುವವರು ಮತ್ತು ಇವರಿಂದ 'ಸಮ್ಮರಿ' ತೀರ್ಮಾನ ಸಿಗುತ್ತೆ ಎಂದು ತಿಳಿದವರು ಹೇಳುವವರಾಗಿದ್ದಾರೆ. ಆದರೆ ಇವೆರಡು ಅಭಿಪ್ರಾಯವು ಸಮಂಜಸವಾದವುಗಳಲ್ಲ. ಮೊಖದಮ್ಮೆ ಚಿಕ್ಕದಾದರೂ ದೊಡ್ಡದಾದರು ಒಂದೇ ಘನತೆಯುಳ್ಳದ್ದು ಮತ್ತು ನ್ಯಾಯ ಡಿಗ್ರಿಯನ್ನು ಪಡೆದ ವಕೀಲರುಗಳ ವಿಚಾರವುಳ್ಳಂತಾದ್ದು ಆದುದರಿಂದ ಇಂಥಾವರ ವಿಚಾರಕ್ಕೆ ತೀರ್ಪು ಕೊಡಬೇಕಾದರೆ ನ್ಯಾಯ ಡಿಗ್ರಿಯನ್ನು ಪಡೆದ ವಕೀಲರುಗಳಿಂದ ಸಾಧ್ಯವೇ ಹೊರತು ಬೇರೆಯವರಿಂದ ನ್ಯಾಯವಾದ ತೀರ್ಪು ಸಿಕ್ಕದು. ಹೀಗಿರುವುದರಿಂದ ಈ ಕೋರ್ಟು ಅಂಥ ವಕೀಲರುಗಳಿಂದ ಇರುವಂತಾದ್ದಾಗಬೇಕು ವಕೀಲರುಗಳು ಇಂಥಾ ಕೆಲಸಲಕ್ಕೆ ಸಿಕ್ಕುವುದಿಲ್ಲವಾದ್ದರಿಂದ ಇಂಥಾ ಕೋರ್ಟನ್ನು ತೆಗೆದು ಇದರಿಂದ ಸ್ವಲ್ಪ ಮೇಲಿನ ಅಂತಸ್ತಿನ ಕೋರ್ಟಿಗೆ ಇದನ್ನು ಇರಿಸುವುದು ಉಚಿತ ಕಾಣುತ್ತೆ ಮತ್ತು ಇದರಿಂದ ನ್ಯಾಯವಾದ ತೀರ್ಪು ಸಿಕ್ಕುವ ಸಂಭವ ಹೆಚ್ಚಾಗಿದೆ. ಇದರಲ್ಲಿ ವಕೀಲರು ಕಾನೂನು ಮೇರೆ ಮೂತಾಡಿದ್ದಲ್ಲಿ ತಿಳಿಯುವ ಶಕ್ತಿ ಆ ಕೋರ್ಟಿನವರಿಗೆ ಇರುತ್ತೆ. ಆದ್ದರಿಂದ ಈ ಬೆಂಚು ಕೋರ್ಟಿನ ಅಗತ್ಯವು ಇಲ್ಲವಾದದ್ದು ಮತ್ತು ಕೆಡುಕುಳ್ಳದ್ದೂ ಆಗಿರುವುದರಿಂದ ಇದನ್ನು ತೆಗೆದು ಹಾಕುವುದು ಅವಶ್ಯವಾಗಿದೆ. ನ್ಯಾಯ ಕೋರುವವ.

'ಯಂ. ಯಲ್. ಸಿ' ಯವರ ವಿಪರೀತ.

ಅಯ್ಯಾ,

ಮೊನ್ನೆ ಯಂ. ಯಲ್. ಸಿ. ಗಳಾದ ಮೆ. ಸಿ. ಯಸ್. ಪೂವಯ್ಯನವರು ಕಮಿಷನರವರಿಗೆ ಕಿಗ್ಗಟ್ಟುನಾಡಿನ ಪರವಾಗಿ ವಕಾಲತ್ತು ವಹಿಸಿ ಅರ್ಪಿಸಿದ ಒಂದು ಪತ್ರದ ತಾತ್ಪರ್ಯವು ಫೆಬ್ರವರಿ ತಾ. 11 ನೇಯ 'ಉದಯ' ಸಂಚಿಕೆಯಲ್ಲಿ ಪ್ರಕಟವಾಯಿತು. ಇವರ ಪತ್ರದಲ್ಲಿ ಕಾಣಿಸಿದಂತೆ, ವಿಶಾಲವಾದ ಕೌನ್ಸಿಲು ಹಾಲ್‌ನಲ್ಲಿ ಇವರು ಕಿಗ್ಗಟ್ಟುನಾಡಿನ ಉದ್ಧಾರಕ್ಕಾಗಿ ಒತ್ತಿ ಒತ್ತಿ ಹೇಳಿದ ಇವರ ಕೂಗು ಸರ್ಕಾರದ ಕಿವಿಗೆ ಕೇಳಿಸದಾದ್ದರಿಂದ ಇವರು ಕೌನ್ಸಿಲಿನ ಹೊರಗೆ, ಅನೂ ಕಮಿಷನರವರ ಸಮ್ಮುಖದಲ್ಲಿ ಬಿನ್ನೈಸಿಕೊಂಡದ್ದು ನೋಡುವಾಗ್ಗೆ ಇವರಿಗೆ ತಮ್ಮ ಕೂಗನ್ನು ಹೇಗಾದರೂ ಮಾಡಿ ಕಮಿಷನರವರ ಕಿವಿಗೆ ಹೊಕ್ಕಿಸಬೇಕೆಂದಂತೆ ತೋರುತ್ತೆ.

ಇರಲಿ, ಇವರ ವಕಾಲತ್ತು ಈಗಲಾದರೂ ಕೇಳಿಸಿರಬೇಕು! ಆದರೆ ಅದರಲ್ಲಿ ಇಲ್ಲಿನ ಯುವಕರು ಬೇರೆ ನಾಡಿನವರ ಸುಬೋಧನೆಯಿಂದ ಸತ್ಯಾಗ್ರಹದಂತಹ ಹಾನಿಕಾರಕ ವೃತ್ತಿಗೆ ಸಿಲುಕಿದುದರ ದುಷ್ಪರಿಣಾಮವು ಇನ್ನೂ ಇವರ ನಾಡನ್ನು ಬಿಟ್ಟಿರುವದಿಲ್ಲವೆಂದು ಯುವಕರ ಪರ ವಕಾಲತ್ತು ನಡೆಸಿರುವರು. ಇವರು ಕಿಗ್ಗಟ್ಟುನಾಡು ಯುವಕರ ಮೇಲೆ ಇಷ್ಟರ ಮಟ್ಟಿಗೆ ದಯಾಪರರೆಂಬದು ಈಗ ಮೂರ್ತ ವ್ಯಕ್ತವಾಯಿತು.

ಇವರ ಸೂಚನೆಯಂತೆ ಕಿಗ್ಗಟ್ಟುನಾಡಿಗೆ ಒಂದು ಹೈಸ್ಕೂಲು ಬೇಕೆನ್ನುವದು ಶ್ಲಾಘನೀಯವೇ. ಆದರೆ ಇವರು ಸತ್ಯಾಗ್ರಹದ ದುಷ್ಪರಿಣಾಮವೆಂಬದು ಯಾವರ್ಥದ್ದೆಂದು ತಿಳಿಯಬರುವದಿಲ್ಲ. ಇವರಿಗೆ 'ಸತ್ಯಾಗ್ರಹ'ದ ಚಾಪು ತಿಳಿಯದ್ದೆಂದು ತೋರುತ್ತೆ. ಹಾಗೂ ಯಂ. ಯಲ್. ಸಿ. ಗಳು, ಸತ್ಯಾಗ್ರಹವು ಎಲ್ಲಿ, ಹೇಗೆ, ಯಾತಕ್ಕಾಗಿ ಎಂಬದರ 'ತ್ರೀಗಣೇಶ' ಯಾರಾದರೂ ಇವರಿಗೆ ತಿಳಿಸಲಾರರೇ ?

ಅಯ್ಯಾ, 'ಯಂ. ಯಲ್. ಸಿ' ಗಳೇ ಸತ್ಯಾಗ್ರಹಕ್ಕೆ ಈ ಸಮಯದಲ್ಲಿ ಪ್ರೇರೇಪಣೇ ಬೇಕೇ ? ಇಂದಿನ ವಾತಾವರಣದಲ್ಲಿ, ಇಂದು ಭಾರತದಲ್ಲಿ ಆಗುವ ನಡವಳಿಕೆಗಳಲ್ಲಿ ಅತ್ಯಗಾರವನ್ನು ಮನ್ನಿಸುವ ಪ್ರತಿಯೊಬ್ಬ ಭಾರತೀಯನೂ ಓರ್ವ ಸತ್ಯಾಗ್ರಹಿಯಲ್ಲವೇ ? ಇವರಿಗೆ ಇತರ ನಾಡಿನವರಿಂದ ಯಾ ನಿಮ್ಮಂಥವರಿಂದ ಪ್ರೇರೇಪಣೆ ಬೇಕೇನು? ಇಂದಿನ ಗುಲಾಮಗಿರಿಯ ಅರಿವನ್ನು ಅರಿತ ಪ್ರತಿಯೊಬ್ಬ ಭಾರತೀಯನೂ ಓರ್ವ ಸತ್ಯಾಗ್ರಹಿ. ನಿಮಗೆ ಇದರ ಗ್ರಹಿಕೆಯಾಗದಿದ್ದಲ್ಲಿ, ನಿಮಗೆ ಒಂದು ಪಕ್ಷ ಇಂಥಾ ಅರಿಯುವಿಕೆಗೆ ಬೇರೆ ನಾಡಿನವರ ಪ್ರೇರೇಪಣೆಯಾಗಬೇಕಾದ್ದಲ್ಲಿ ನಿಮ್ಮ ನಾಡಿನ ಯುವಕರಿಗೂ ಹಾಗೇ 'ಸತ್ಯಾಗ್ರಹದ 'ಜೋಗುಳ'ವಾಗಿದೆಂದು ತಿಳಿದಿರುವಿರಾ? ಎಂದೂ ಇಲ್ಲ

'ಸತ್ಯಾಗ್ರಹಕ್ಕೆ ಕಿಗ್ಗಟ್ಟುನಾಡು, ಕೊಡಗು, ಮದರಾಸು ಎಂಬಿ ಅಂತರವಿದೆಯೇ ? ಅನು ಸಮಗ್ರ ಭಾರತ ವಿಚಾರವಲ್ಲವೇ ಪ್ರತಿರಲ್ಲಿ ಈ ತೆರನಾದ ಸಂಕುಚಿತ ವಿಷಯವೇ ಇಲ್ಲ. ಪಾಪ ನಿಮ್ಮ ಅರಿಯುವಿಕೆಯೇ ಬೇರೆಯಾಗಿರುವದಲ್ಲ! ಕಿಗ್ಗಟ್ಟುನಾಡಿನಲ್ಲಿ ಅಂಥ ಸತ್ಯಾಗ್ರಹಿಗಳು ಹೆಚ್ಚಾದದ್ದು ನಿಮಗೆ ಹಾನಿಕಾರಕವಾಗಿ ತೋರಿದ್ದು ಬಹಳ ವಿಚಿತ್ರ. ಆ ಗೌರವನ್ನು ಗಾಂಭೀರ್ಯವನ್ನು ನಿಮ್ಮ ಶಕ್ತಿಯ ಕೊರತೆಗೆ ವಿಷಾದಿಸಬೇಕಾಗಿದೆ. ಇದನ್ನು ನೋಡುವಾಗ್ಗೆ 'ಕತ್ತೆ ಬಲ್ಲುದೇ ಹೊತ್ತ ಕಸ್ತೂರಿಯ ಪರಿಮಳವ' ಎಂಬ ಗಾದೆಯ ನೆನಪಾಗುತ್ತದೆ. ನಿಮಗೆ ಕಿಗ್ಗಟ್ಟುನಾಡು, ಮೇಂದಲೆನಾಡು ಎಂಬ ಭೇದ ತಂತ್ರದಿಂದ ನಿಮ್ಮ ದೇಶಸೇವಾ ಕಲೆಯನ್ನು ಬಹಿರಂಗಗೊಳಿಸಲು 'ಸತ್ಯಾಗ್ರಹ'ವೆಂಬ ವಿಷಯವು ತೀರಾ ಅಸಂಭದ್ಧವಾಗಿದೆ. ಕಿಗ್ಗಟ್ಟುನಾಡಿನಲ್ಲಿ ವಿದ್ಯಾ ಪ್ರಸಾರಣೆಯು ನಿರ್ಲಕ್ಷಿಸಲ್ಪಟ್ಟದ್ದರಿಂದ ಕಿಗ್ಗಟ್ಟುನಾಡು ಬಡತನದ ತವರೂರು ಆಗಿದೆಂಬ ನೂತನ ಶೋಧನೆಯನ್ನು ನಮ್ಮ ಮೊನ್ನೆ ಯಂ. ಯಲ್. ಸಿ ಗಳು ಕಂಡು ಹಿಡಿದಿರುವರು! ಆರ್ಥಿಕ ದುಃಸ್ಥಿತಿಗೆ ಈಗಿನ ಹೈಸ್ಕೂಲು ವಿದ್ಯಾಭ್ಯಾಸವಿಲ್ಲದಿರುವದೇ ಕಾರಣವೆಂದರೆ ಈಗ ವಿದ್ಯೆಯು ಹೆಚ್ಚುತ್ತಲಿದ್ದರೂ ಬಡತನದ ಗೋಳು ಯಾತಕ್ಕೆ ಇಷ್ಟು ಜೋರು ? ಬಡತನದ ಇತರ ಕಾರಣಗಳು ನಮ್ಮ ಯಂ. ಯಲ್. ಸಿ ಗಳಿಗೆ ತಿಳಿಯದಾಯಿತೇ? ಇವರ ಈ ನೂತನ ಆರ್ಥಿಕ ಶೋಧನೆಗೆ ಕಮಿಷನರು ಮೆಚ್ಚಿರಬೇಕಷ್ಟೆ! ಕಿಗ್ಗಟ್ಟುನಾಡಿನ ಬಡತನಕ್ಕೂ, ವಿದ್ಯಾ ಪ್ರಸಾರಕ್ಕೂ, ಭಾರತವನ್ನು ಋಣಮುಕ್ತವನ್ನಾಗಿ ಮಾಡಬೇಕಾದ ಏಕ ಮಾತ್ರ ವಿಧಾನವಾದ 'ಸತ್ಯಾಗ್ರಹ'ಕ್ಕೂ ಜೋಡಣೆಯನ್ನು ಕಲ್ಪಿಸಿ ದೇಶದಲ್ಲಿ ವೈವಿಧ್ಯಗಳನ್ನುಂಟುಮಾಡಿಸುವ ಇಂಥ ಬೂಟಾಟಿಕೆಗಳನ್ನು ಸಕಲರೂ ಖಂಡಿಸಬೇಕಾಗಿದೆ. ಸಿ. ಯಂ. ಪೂಣಚ್ಚ.

ತಲೆ ಹೊಡೆದು ಅಳತೆ ಮಾಡಲು ಬಲಾತ್ಕರಿಸುವುದು ಖಾನೂನಿಗೆ ವಿರೋಧ.

ಅಯ್ಯಾ,

ತಾ. 14 ರ 'ಕೊಡಗು' ಪತ್ರಿಕೆಯ ಬಾತ್ಮಿದಾರರಾದ ಮೆ. 'ಕೆ. ಬಿ.' ಯವರು ನನ್ನ ಬಾತ್ಮಿಗೆ ತಪ್ಪು ಅರ್ಥ ಮಾಡಿರುವರೆಂಬುದರಲ್ಲಿ ಸಂಶಯವಿಲ್ಲ. ಮೆ. ಕೆ. ಬಿ. ಯವರು ಹೇಳಿದ ಮೇರೆ ಆನರೇಬಲ್ ಚೀಫ್ ಕಮಿಶನರವರು ನೋಟೆ ಮಾಡಿರುವುದು ಸ್ಪೇಂಡಾರ್ಡ್ ಅಳತೆಯು ಎಂಥಾದ್ದೆಂಬ ಜನರಿಗೆ ತಿಳಿಯಲು ಮಾತ್ರ ಆಗಿದೆ. ನ್ಯಾಯವಿಧಾಯಕ ಭೆಯು ಸಹ ಇದರಿಂದಲೇ ಅದನ್ನು ಮಂಜೂರು ಮಾಡಿ ಈ ಖಾನೂನು ಮಾಡಿರುವುದರ ಫಲವಾಗಿ ತಲೆ ಹೊಡೆದು ನರಿಗೆ ಅಳತೆ ಮಾಡಿಕೊಡುವುದಕ್ಕಿಂತ ಕಡಿಮೆ ಕೊಡುವು ಶಿಕ್ಷಾಸ್ಪದವಾಗುತ್ತದೆಯೇ ಹೊರತು ಹೆಚ್ಚು ಕೊಡುವುದು ಶಿಕ್ಷಾಸ್ಪದವಾಗುವುದಿಲ್ಲ. ಈ ನೋಟಿಫಿಕೇಶನಿನ ಉಲ್ಲಂಘನೆಗೆ ಪಿನಲ್ ಕೋಡಿನ 265 ನೆಯ ಸೆಕ್ಷನ್ ಅಲ್ಲದೆ ಇನ್ನಾವುದಾದರೂ ಖಾನೂನು ಇನೆಯೇ ? ಮೆ. ಕೆ. ಬಿ. ಯವರು ಯಎಟ್ಟು ಅದನ್ನು ತಿಳಿಸಲಿ.

265ನೆಯ ಸೆಕ್ಷನ್ ಹೇಳುವುವೇನೆಂದರೆ—'Who fraudulently uses any false weight or measure of length or capacity or fraudu uses any weight or any measure of lengti capacity as a different weight or measure t what it is etc. 'ಯಾವುದಾದರೂ ವಂಚನೆ ಮಾಡಬೇಕೆಂಬ ಇರಾಧೆಯಿಂದ ಸುಳ್ಳು ಉದ್ದ ಅಥವ ಗಾತ್ರದ ಸುಳ್ಳು ಭಾರದ ಕಲ್ಲು ಅಥವ ಸುಳ್ಳು ಅಳತೆಯ ಪಾತ್ರೆಯನ್ನು ಉಪಯೋಗಿಸಿದರಾಗಲಿ, ವಂಚಿಸಬೇಕೆಂಬ ಇರಾಧೆಯಿಂದ ಒಂದು ಭಾರದ ಕಲ್ಲು ಅಥವ ಅಳತೆಯ ಪಾತ್ರೆಯನ್ನು ಇನ್ನೊಂದು ಭಾರದ ಕಲ್ಲು ಅಥವ ಅಳತೆಯ ಪಾತ್ರೆಯಂದು ಉಪಯೋಗಿಸಿದರಾಗಲಿ' ಎಂದು ಮುಂತಾಗಿ ಇವೆ ಈ ಸೆಕ್ಷನಿನಲ್ಲಿರುವ ಮುಖ್ಯ ಶಬ್ದಗಳು (1) ವಂಚನೆ ಮಾಡಬೇಕೆಂಬ ಇರಾಧೆ, (2) ಸುಳ್ಳು ಉದ್ದ ಅಥವ ಗಾತ್ರದ ಸುಳ್ಳು ಭಾರದ ಕಲ್ಲು ಅಥವ ಸುಳ್ಳು ಅಳತೆಯ ಪಾತ್ರೆಯನ್ನು ಉಪಯೋಗಿಸುವುದು, (3) ಒಂದು ಭಾರದ ಕಲ್ಲು ಅಥವ ಅಳತೆಯ ಪಾತ್ರೆಯಂದು ಇನ್ನೊಂದು ಭಾರದ ಕಲ್ಲು ಅಥವ ಅಳತೆಯ ಪಾತ್ರೆಯನ್ನು ಉಪಯೋಗಿಸುವುದು. ಈ ಸೆಕ್ಷನಿನಲ್ಲಿರುವ 'ವಂಚನೆ' ಎಂಬ ಶಬ್ದದ ಅರ್ಥವೇನು ? ಒಂದು ಸ್ಪೇಂಡಾರ್ಡ್ ಅಳತೆಗಿಂತ ಕಡಿವೆಯನ್ನು ಕೊಟ್ಟು ವೂರುವವನು ವಂಚನೆಯಿಂದ ತನಗೆ ಲಾಭವಾಗುವಂತೆ ಮಾಡಿಕೊಳ್ಳುವುದು. (Weir's Criminal Rulings Vol, 1. Page 235) ವೂರುವವನಿಗೆ ವಂಚನೆಯಿಂದ ಲಾಭವಾಗದೆ ಹೆಚ್ಚು ಅಳತೆ ಕೊಟ್ಟರೆ ತಪ್ಪೆಲ್ಲಿದೆ ? ತಲೆ ಹೊಡೆದು ಅಳತೆ ಮಾಡಿರೆಂದು ಹೇಳುವುದು ಖಾನೂನಿಗೆ ವಿರೋಧ. ಹಾಗೆ ಮಾಡಲೇಬೇಕೆಂದು ಬಲಾತ್ಕರಿಸುವುದು ಖಾನೂನಿಗೆ ವಿರೋಧ. ಒಂದು ಸ್ಪೇಂಡಾರ್ಡ್ ಅಳತೆಯ ಪಾತ್ರೆಯ ನಿಷ್ಕರ್ಷೆ ಮಾಡುವುದರ ಉದ್ದೇಶವು ತಮಗೆ ಎಷ್ಟು ಪದಾರ್ಥವು ಸಿಕ್ಕಬೇಕೆಂದು ಜನರಿಗೆ ತಿಳುವಳಿಗೆ ಕೊಡುವುದಕ್ಕೆ ಮಾತ್ರವೇ ಹೊರತು ಹೆಚ್ಚಿಗೆಗಲ್ಲ. ಒಂದು ಸರಿಯಾದ ಅಳತೆಯ ಸೇರಿನಲ್ಲಿ ಗಿರಾಕಿಯೊಬ್ಬನು ಬರೇ ಮುಕ್ಕಾಲು ಭಾಗವನ್ನೇ ಅಳೆಸಿಕೊಂಡು ಒಂದು ಸೇರು ಆ ಪದಾರ್ಥದ ಕ್ರಯಕೊಟ್ಟು ಕೊಂಡುಕೊಂಡರಾಗಲಿ, ಅಂಗಡಿಗಾರನು ನ್ಯಾಯವಾದ ಸೇರನ್ನು ಹಿಡಿದುಕೊಂಡು ತಲೆ ತಟ್ಟಿ ಕೊಡುವುದಕ್ಕಿಂತ ಕಡಿಮೆಯಾಗದೆ ಪದಾರ್ಥವನ್ನ ಬೇಕಷ್ಟು ರಾಶಿಯಾಗಿ ಹಾಕಿಕೊಟ್ಟು ಒಂದು ಸೇರಿನ ಲೆಕ್ಕ ತೆಗೆದುಕೊಂಡರಾಗಲಿ ಯಾವ ತಪ್ಪು ಇಲ್ಲ. ವಂಚನೆಯ ಅಳತೆಯನ್ನು ಕೊಟ್ಟಿದ್ದಕ್ಕೆ ಪಿರ್ಯಾದಿದಾರನು ಇಲ್ಲದೆ ಪೊಲೀಸಿನವರಾಗಲಿ, ಅಳತೆಯ ಇನ್ಸ್‌ಪೆಕ್ಟರಾಗಲಿ ಕೇಸ್ ಮಾಡಲು ಅಧಿಕಾರವಿಲ್ಲ. ಅದು ತೆಗೆದುಕೊಳ್ಳುವವರ ಮತ್ತು ಕೊಡುವವರ ಇಷ್ಟ. ಅಳತೆಯ ಇನ್ಸ್‌ಪೆಕ್ಟರ ಅಧಿಕಾರವು ಅಳತೆಮಾಡಿ ಕೊಡುವ ಪಾತ್ರೆಗಳೂ ಭಾರದ ಕಲ್ಲುಗಳೂ ಸ್ಪೇಂಡಾರ್ಡ್ ಅಳತೆ ಮತ್ತು ಭಾರಕ್ಕೆ ಸರಿಯಾಗಿವೆಯೇ ಇಲ್ಲವೇ ಎಂದು ನೋಡುವುದು ಮಾತ್ರವೇ ಹೊರತು ಹೆಚ್ಚಿನದಲ್ಲ, ಅವುಗಳು ಸ್ಪೇಂಡಾರ್ಡ್ ಅಳತೆ ಮತ್ತು ತೂಕಕ್ಕೆ ಕಡಮೆ ಇದ್ದರೆ ಮೊಖದ್ದಮ್ಮೆ ಮಾಡಬಹುದು.

ತಲೆ ತುಂಬಿ ಕೊಟ್ಟಿದ್ದಕ್ಕೆ ಈಗಾಗಲೇ ಅನೇಕರಿಗೆ ಜುಲ್ಮಾನೆಗಳಾಗಿವೆಯೆಂದು ಮೆ. ಕೆ. ಬಿ. ಯವರು ಬರೆದಿರುವದು, ಯಾವ ಮೇಜಿಸ್ಟ್ರೇಟರುಗಳು ಯಾವ ಕಾಲದಲ್ಲಿ ಯೂ ವ್ಯಾವ ರೀತಿಯ ಜಡ್ಜಿಮೆಂಟ್ ಕೊಟ್ಟಿರುವರೆಂದು ದಯವಿಟ್ಟು ಅವರು ತಿಳಿಸಬೇಕಾಗಿ ಕೇಳಿಕೊಳ್ಳುತ್ತೇನೆ. ಲೋಕದ ಎಲ್ಲ ಭಾಗಗಳಲ್ಲೂ ವಂಚನೆಗೆ ಶಿಕ್ಷೆಯಿದ್ದರೆ ಕೊಡಗಿನಲ್ಲಿ ಪ್ರಾಮಾಣಿಕತೆಗೆ ಶಿಕ್ಷೆ ಸಿಕ್ಕುವುದರಿಂದ ಈ ಜಡ್ಜಿಮೆಂಟುಗಳು ಲಾರಿಪೋರ್ಟುಗಳಲ್ಲೂ ಪತ್ರಿಕೆ ಪುಸ್ತಕಗಳಲ್ಲೂ ಸ್ಥಿರವಾಗಿರುವಂತೆ ಮಾಡಬೇಕು. ಈ ಜಡ್ಜಿಮೆಂಟುಗಳಿಗೆ ಮೇಲಿನ ಕೋರ್ಟಿನವರು ಏನು ಹೇಳುವರು ? ಮೇಲಿನ ಕೋರ್ಟಿನವರಿಗೆ ಇರುವ ಅಂತರ್ನಿಷ್ಠ (Inherent) ಅಧಿಕಾರದಿಂದ ಈ ಜಡ್ಜಿಮೆಂಟುಗಳನ್ನು ರದ್ದು ಮಾಡಬೇಕೆಂದು ನಾನು ಮೇಲಿನ ಕೋರ್ಟಿನ ನ್ಯಾಯಾಧೀಶರಿಗೆ ಈ ಮೂಲಕ ಪ್ರಾರ್ಥಿಸುತ್ತೇನೆ.

ಮೆ. ಕೆ. ಬಿ. ಯವರ ಕಾನೂನಿನ ವಾಕನೆಯು ನವೀನ ತರದ್ದಾದಿಯೆಂದು ಕಾಣುತ್ತದೆ. ಕವರಿಗೆ ಹಚ್ಚಬೇಕಾದ ಒಂದೂವರೆ ಆಲಾಣೆ ಸ್ಟ್ಯಾಂಪಿನ ಬದಲಿಗೆ ಒಂದು ರೂಪಾಯಿಯ ಸ್ಟ್ಯಾಂಪು ಹಚ್ಚಿದರಾಗಲಿ, ಮುಂದಿನ ವರ್ಷದ ಕಂದಾಯವನ್ನು ಈ ವರ್ಷವೇ ಪಾವತಿ ಮಾಡಿದರಾಗಲಿ, 40 ರೂ. ಕಂದಾಯ ಕೊಡಬೇಕಾದಲ್ಲಿ 50 ರೂ. ಕಂದಾಯ ಪಾವತಿ ಮಾಡಿದರಾಗಲಿ, ೨೦ ರೂ. ಇನ್‌ಕಂಟ್ಯಾಕ್ಸ್ ಕೊಡಬೇಕಾದಲ್ಲಿ 100 ರೂ. ಪಾವತಿ ಮಾಡಿದರಾಗಲಿ, ಮಿಠಾಯಿಗಾರನು ತನ್ನ ಮಿಠಾಯಿಯು ಕಟ್ಟಿದೆಯೆಂದು ಗಿರಾಕಿಗಳಿಗೆ ಎಚ್ಚರಿಸಿದರಾಗಲಿ, ಕೊಲೆಗಾರನನ್ನು ಹಿಡಿದರಾಗಲಿ, ಶಿಕ್ಷೆಗಳು ಯಾವ್ಯಾವುವೆಂದು ಕೆ. ಬಿ. ಯವರು ದಯವಿಟ್ಟು ತಿಳಿಸುವರೆ ? ಕೆ. ಎನ್.

ಪ್ರಸಿದ್ಧ ಔಷಧಗಳು.

ಮಲೇರಿಯಾಕ್ಕೆ ಒಂದೇ ಸಿದ್ಧೌಷಧ.

ಶುದ್ಧವಾದ ಹಿಂದೂಸ್ಥಾನದ ಮೂಲಿಕೆಗಳಿಂದ ತಯಾರಾದದ್ದು.
ಕ್ವಿನಿನನ್ನು ಯಾವ ರೂಪದಲ್ಲಾ ಸೇರಿಸಿಲ್ಲ.

"ನವರತ್ನ ಅಲ್ಮಾರಿಯಾ"

ಹಿಂದೂದೇಶದ ಔಷಧಗಳ ವಿಚಾರದಲ್ಲಿ ಶ್ರೇಷ್ಠತೆಯನ್ನು ಪಡೆದ ಡಾ. ಕೆ. ಯಂ. ನಾಡ್ಕರ್ಣಿ ಮತ್ತು ಡಾ. ಕೆ. ಸಿ. ಬೋಸ್‌ರವರ ಗ್ರಂಥಗಳಿಗನುಗುಣವಾಗಿ ಅತೀ ಪರಿಣಾಮಕಾರಕ ಔಷಧಗಳ ಸಂಯೋಜನೆಯಿಂದ ತಯಾರಿಸಲ್ಪಟ್ಟ ಈ ಔಷಧವು ಹೆಚ್ಚು ಫಲಕಾರಿಯಾಗಿರುವದು.

ಇದರಲ್ಲಿರುವ ಔಷಧಗಳು.

1. Andrographis Paniculate
2. Cocculas Cordifolius
3. Berriberies Aristata
4. Vernonis Cinerarea
5. Evolvulas Alsinoides
6. Dashmoola
7. Aconitum Heterophylum
8. Alstonia Scholaris

ಮಲೇರಿಯಾಕ್ಕೆ ಅತ್ಯುತ್ತಮ ಔಷಧಿ. ಕ್ವಿನಿನನ್ನು ಯಾವ ವಿಧದಲ್ಲೂ ಸೇರಿಸದೆ ಯಾವ ಬಾಬಿನಲ್ಲೂ ಹಾನಿಕರವಾಗದ ಸಂಜೀವಿನಿ. ಇದನ್ನು ಎಷ್ಟು ಸೇವಿಸಿದರೂ ಕ್ವಿನೀನ್ ಸೇವನೆಯಿಂದ ಉಂಟಾಗಬಹುದಾದ ಮಹಾ ಹಾನಿಗಳ ಭಯವೇ ಇಲ್ಲ. ಒಮ್ಮೆ ಪರೀಕ್ಷಿಸಿದಲ್ಲು ಮತ್ತೆ ಬಿಡಲಾರಿರಿ.

ತಯಾರಿಸುವವರು:—ದಿ ನವರತ್ನ ಫಾರ್ಮಸಿ,
ಪೋ. ಬಾ. ನಂಬರು 68, ಕೊಚಿನ್.

ಸ್ಟೋಕಿಸ್ಟ್—ಎ. ಎಸ್. ಮೂಚಯ್ಯ, ಬಟ್ಟೆ ವ್ಯಾಪಾರಿ, ಸುಂಟಿಕೊಪ್ಪ.
ಏಜೆಂಟ್—ವಿ. ಬಿ. ಕಾಮತ್, ಮೆಹದೇವಪೇಟೆ, ಮಡಿಕೇರಿ.

52—37

ನವರತ್ನ ಫಾರ್ಮಸಿ,

NOTICE.

Mr. C. P. Appachu has been appointed by the Coffee Growers Association of India to recruit members (both full and Associate) for the association.

Suniticoppa, W. A. DAVIES.
1-2-1936 (3) (*Secretary.*)

ಬೇಕಾಗಿದ್ದಾರೆ.

'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲಿ ಮಾಡಲು ಕುಶಲರೂ, ವ್ಯಾಪಕರೂ ಆದ ವಿಜಂಟರು ಬೇಕು. ಇಷ್ಟು ಕೆಲಸ ಮಾಡುವವರಿಗೆ ಒಳ್ಳೆ ಸುಸಂದರ್ಭ. ಯೋಗ್ಯ ಕಮಿಷನುಗಳು ಕೊಡಲಾಗುವದು. ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡೆಯಿಸಿರಿ.

ಮೇನೇಜರು,
"ಕೊಡಗು" ಲಿಮಿಟೆಡ್,

ಡಾಕ್ಟರ್ ಮೋತ್ಯುಸ್ ಎಬ್ರಹಾಮ್.
ದಂತ ವೈದ್ಯರು.
ಗೀತಾಂಜಲಿ ಬಂಗ್ಲೆ.
(ಪೋಸ್ಟಾಫೀಸು ಎದುರುಗಡೆ.)

ಸಕಲ ಹಲ್ಲು ನೋವುಗಳನ್ನು ಶೀಘ್ರವಾಗಿ ಗುಣಪಡಿಸುವದಲ್ಲದೆ, ಸುಂದರವಾದ ಕೃತ್ರಿಮ ಹಲ್ಲುಗಳನ್ನು ಮನ ಒಪ್ಪುವಂತೆ ಕಟ್ಟುವರು. ಒಮ್ಮೆ ಪರೀಕ್ಷಿಸಿದಲ್ಲು ತಿಳಿಯುವುದು. [52—18]

---

೪೦ ವರ್ಷಗಳಿಂದ ಅನುಭವಪಟು ಪ್ರಖ್ಯಾತಿ
ಕೊಂದಿದ

ಕರ್ಕಕಂಪನಿ ೧೯೩೬

ಜ್ವರದ ಗುಳಿಗೆಗಳು.

ಹಳೆಜ್ವರ, ಚಾತುರ್ಥಿ ಜ್ವರ, ದಿನಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಂಗಳ ಮೇಲೆ ರಾಮ ಬಾಣದಂತೆ ಇವೆ. ಬಾಟ್ಲಿಗೆ ರೂ. ೧. ಟಪಾಲು ಖರ್ಚಿಗೆ ಜರೂರು ಕಳಿಸಿಕೊಳ್ಳಿ.

ಗಣೇಶ ರಾಮಚಂದ್ರ ಕರ್ಕ,
(25—20) ಮತ್ತು ಕಂಪನಿ,
ಗಿರಗಾಂವ, ಮುಂಬಯಿ.

SHIROMANI NARAYANACHARYA
Choukhamba Benares City.

THIS MAN
OUR CUSTOMER

ಶಾಸ್ತ್ರಗಳೇ, ಪೂರ್ವಿಕರು ಆರೋಗ್ಯರೇ ಆಥವ ಈಗಿನವರೇ? ರಾಮಣ್ಣಯ್ಯನವರೇ, ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ. ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆಮಾಡುತ್ತ ಇದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿ ಸಂಪತ್ತು, ಕೀರ್ತಿ ಇವುಗಳೆಲ್ಲಾ ಆಗುವುದಾಗಾದರೆ ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣೀ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷೀ ದೊರೆಯುವುದು.

ಸಣ್ಣ ಆಡ್ಡೆ ಪ್ರವಾಣದ ಕಂತಿಸರ 1ಕ್ಕೆ ಆಣೆ 1 ರಿಂದ ರೂ. 25ರ ವರೆಗೆ. 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಆಣೆ 30ರಿಂದ ರೂ. 25ರ ತರೆಗೆ. ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ. 3ರಿಂದ ರೂ. 50ರ ವರೆಗೆ. ಮತ್ತು 3—4—5—6—7—8 ಮುಖಗಳ ಕಾಳು 1ಕ್ಕೆ ಆಣೆ 4 ರಿಂದ ರೂ. 10. ಮತ್ತು 9—10—11 ಮುಖಗಳುಳ್ಳ ಕಾಳು 1ಕ್ಕೆ ರೂ. 10ರಿಂದ 30ರ ವರೆಗೆ. 12—13—14 ಮುಖದ ಕಾಳು 1ಕ್ಕೆ ರೂ. 40ರಿಂದ 100ರ ವರೆಗೆ. ಸಣ್ಣ ರುದ್ರಾಕ್ಷೀ ಅವರೆ ಕಾಳಿಗಿಂತ ಸಣ್ಣದಾಗುತ್ತ ಕ್ರಯ ಜಾಸ್ತಿ. ದೊಡ್ಡ ರುದ್ರಾಕ್ಷೀ ಅದಕೆಗಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುವದು. (ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟಾಂಪು ಕಳುಹಿಸಿದರೆ 3 ಇನಾಮುಗಳು—1 ವಿಶ್ವೇಶ್ವರ ಪಟ, 1 ಕಾಶೀ ನಕ್ಷೆ, 1 ಕಾಶಿ ಪಕ್ರಂಬರ ಕೆಟಲಾಗಿನೊಡನೆ 3 ಇನಾಮುಗಳು.)

ಶಿರೋಮಣಿ ನಾರಾಯಣಾಚಾರ್ಯ,
52—25 ಚೌಖಂಬಾ ಬೆನಾರಿಸ್, (ಕಾಶೀ.)

ಗುಂಡು ಹೊಡೆಯುವ ಕ್ರಮಗಳು.
ಉಪಯುಕ್ತ ಸೂಚನೆಗಳು.

ಶಿಕಾರಿಗಳಿಗೆ:—

ನಮ್ಮ ಕೋವಿ ಮತ್ತು ತೋಟಾಗಳು ಶಿಕ್ಷಕ (Our arms and ammunition GUIDE 3) ಇದರಲ್ಲಿ ಗುಂಡು ಹೊಡೆಯುವ ನೂತನ ವಿಧಾನಗಳ ವಿಷಯ ಅತೀ ಉಪಯುಕ್ತ ಸೂಚನೆಗಳಿವೆ.

Goolamhusain Allibhoy & Sons, Ltd.,

26—20 210, Abdulrehman Street, BOMBAY 3.

ಚ್ಯವನಪ್ರಾಶ ಲೇಹ.

ಇದು ಅತ್ಯಂತ ಶಕ್ತಿವರ್ಧಕ ರಸಾಯನ. ಸರ್ವ ತರಹದ ನರಗಳ ದೌರ್ಬಲ್ಯಕ್ಕೂ, ಧಾತು ಕ್ಷೀಣತೆಗೂ, ಕೆಮ್ಮು, ಕಫ, ಉಬ್ಬಸ, ಸ್ವರಭಂಗ, ಎದೆ ನೋವು, ಕ್ಷಯ ಮೊದಲಾದ ದೋಷಗಳಿಗೆ ಅತ್ಯುತ್ತಮ. ದೇಹ ಶಕ್ತಿಯನ್ನು ಹೆಚ್ಚಿಸಿ ಆರೋಗ್ಯವನ್ನೂ, ಜೀರ್ಣ ಶಕ್ತಿಯನ್ನೂ ಅಭಿವೃದ್ಧಿಗೊಳಿಸುವುದು. ಶಕ್ತಿ ಹೀನರು ಶಕ್ತಿವಂತರಾಗಿ ದೃಢಕಾಯರಾಗುವರು. ಪವುಂಡು 1ರ ರೂ. 2—8—0 ½ಕ್ಕೆ 1—5—0

ದ್ರಾಕ್ಷಾರಿಷ್ಟ.

ದೇಹಕ್ಕೂ ಮೆದುಳಿಗೂ ಉಲ್ಲಾಸವನ್ನು ಉಂಟುಮಾಡು ಅತ್ಯುತ್ತಮ ಔಷಧಿ. ಅತಿರೇಕ ದೌರ್ಬಲ್ಯದಿಂದ ಉಂಟುಮಾಡುವ ಎಂಥಾ ಸಮಸ್ಯದಲ್ಲಿಯೂ ಶಕ್ತಿಯನ್ನು ಇರಗೊಳಿಸುವುದು. ದೇಹದಲ್ಲಿ ತಲೆದೋರುವ ಉಷ್ಣತೆ, ಒಣಕೆಮ್ಮು, ಕ್ಷಯ ಎದೆನೋವು, ಜ್ವರ, ಪಿತ್ತದ ವಿಕಾರ, ತಲೆ ತಿರುಗುವುದು, ಮಲಬದ್ಧತೆ ಇವುಗಳನ್ನೆಲ್ಲಾ ಹೋಗಲಾಡಿಸಿ ರುಚಿಯನ್ನೂ, ಹಸಿವನ್ನೂ, ಸುಖನಿದ್ರೆಯನ್ನೂ ಉಂಟುಮಾಡುವುದು.

24 ಔನ್ಸ್ ಬಾಟ್ಲಿ 1ರ ರೂಪಾಯಿ 2—0—0 12 ಔನ್ಸ್ ಬಾಟ್ಲಿಗೆ ರೂಪಾಯಿ 1—2—0
ದಂತ ಕಾಂತಿ ಚೂರ್ಣ ಡಬ್ಬಿ 1ರ 0—?—6 12 ಕ್ಕೆ ರೂಪಾಯಿ 1—12—0

ಕೆಟಲಾಗಿಗೆ ಬರೆಯಿರಿ-

ಎಂ. ಗಣಪಯ್ಯ ಎಂಡ್ ಸನ್ಸ್,
ಆಯುರ್ವೇದಿಕ್ ಫಿಜಿಶಿಯನ್ಸ್. ರಥಬೀದಿ, ಮಂಗಳೂರು.

(1) ವಿ. ಬಿ. ಕಾಮತ್. ಮಹದೇವಪೇಟೆ, ಮಡಿಕೇರಿ (ಕೊಡಗು).
(52—32) (2) ಎ. ಎಸ್. ಮಾಚಯ್ಯ, ಬಟ್ಟೆ ವ್ಯಾಪಾರಿ, ಸುಂಟಿಕೊಪ್ಪ.

ಎರಡು ಕೆಲಸಕ್ಕೊಂದೇ ಸಾಬೂನು

"ಮೈಸೂರು ಗಂಧದ ಸಾಬೂನು."

ಈ ಸಾಬೂನು ನಾಜೂಕಾದ ಚರ್ಮವನ್ನು ಶುಭ್ರಗೊಳಿಸುವುದು ಮಾತ್ರವಲ್ಲ; ಸಂರಕ್ಷಣೆಯನ್ನೂ ಮಾಡುತ್ತದೆ. ಯಾರು ಯಾರು ತನ್ನ ಆರೋಗ್ಯದ ಕಡೆ ಗಮನವಿರುವರೋ ಯಾರು ಯಾರು ತನ್ನ ಚರ್ಮವನ್ನು ಎಚ್ಚರಿಕೆಯಿಂದ ನೋಡುವರೋ ಅವರೆಲ್ಲರೂ ಉಪಯೋಗಿಸುವುದು

ಮೈಸೂರು ಗಂಧದ ಸಾಬೂನು.

ಎಲ್ಲಾ ಅಂಗಡಿಗಳಲ್ಲೂ ಸಿಕ್ಕುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ.

52—51 ಬಂಗಳೂರು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಕೋ-ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲಿ)

		ರೂ
ಶೇರ್ ಬಂಡವಾಳ	—	50,000— 0—0
ವಸೂಲಾದ ಶೇರ್ ಮೊಬಲಗು	—	37,180— 0—0
ಜಮೂಬಂದ ಠೇವಣಾತಿ	—	25,9035—8—10
ವಸೂಲಾದ ಕ್ಷೇಮನಿಧಿ	—	1,03851— 4—0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 4-8-0ರ ದರದಲ್ಲಿಯೂ ಒಂದು ವರ್ಷದ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ದರದಲ್ಲಿಯೂ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಲಪರೇಟಿವ್ ರಿಜಿಸ್ಟ್ರಾರರಿಂದ ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟರು,
ಪಂದ್ಯಂಡ ಐ. ಬೆಳ್ಯಪ್ಪನವರು.

ಮ್ಯಾನೇಜರ್,
ರಾ. ಸಾ. ಪಾಂಡಂಡ ಚಂಗಪ್ಪನವರು,

ಸಕ್ರೆಟರಿ
ಮನೆಯಪ್ಪಂಡ ಬೆಳ್ಯಪ್ಪನವರು.

ಕಾರ್ಯಾಲಯ 1—2—1936.

ಭಾರತದ ಮುಂದಿನ ಜನಾಂಗದ ಆರೋಗ್ಯ ಮತ್ತು ಕ್ಷೇಮ ವರ್ಧನೆಯು ಇಂದಿನ ಅನೇಕ ರಾಜಕೀಯ ಮತ್ತು ಸಾಮಾಜಿಕ ಮುಂದಾಳುಗಳ ದೃಷ್ಟಿಯಲ್ಲಿರುವ ಒಂದು ದೊಡ್ಡ ಸಮಸ್ಯೆಯೂ ಆಗಿರುತ್ತದೆ. ತಮ್ಮ ಮಕ್ಕಳ ದೇಹವು ಪುಷ್ಟಿಯೂ ಆಗಿಯೂ ಸುದೃಢವಾಗಿಯೂ ಇರಲಿಕ್ಕೆ ಬೇಕಾದ ಒಂದು ಅಪೂರ್ವವಾದ ಸಂಜೀವಿನಿಯನ್ನು ಎಲ್ಲರೂ ತಿಳಿದದ್ದಾಗಿದ್ದರೆ ಈ ವಿಚಾರವು ಇಷ್ಟು ಕಠಿಣತರವಾದ್ದಾಗಿರುತ್ತಿದ್ದಿಲ್ಲ. ಈ ಸಂಜೀವಿನಿಯಂತಿರುವ ಔಷಧವನ್ನು ಹೆಚ್ಚು ಸಫಲತೆಯಿಂದ ಅನೇಕರು ಭಾರತದ ಉದ್ದಗಲಕ್ಕೂ ಕಳೆದ 50 ವರ್ಷಗಳಿಂದ ಉಪಯೋಗಿಸುತ್ತಲಿರುವರು. ಮಗುವು ಹೆಚ್ಚು ಕೃಶವಾಗಿ, ನಿರ್ಬಲತೆಯಿಂದ ಕೂಡಿ ಹಾಲನ್ನು ಸಹ ಜೀರ್ಣಿಸಿಕೊಳ್ಳಲಕ್ಕವಾಗಿ, ಆಗಿಂದಾಗ್ಯೆ ಶೀತ, ಕೆಮ್ಮು ಮೊದಲಾದ ರೋಗಗಳಿಗೀಡಾಗಿರುವಾಗಲೆ ಒಡನೆ ಪ್ರಸಿದ್ಧಿ ಹೊಂದಿರುವ

ಡೋಂಗರೆ ಬಾಲಾಮೃತವನ್ನು

ಕೊಡಬೇಕು. ಡೋಂಗರೆ ಬಾಲಾಮೃತವು ಒಂದು ಟಾನಿಕ್. ಎಲ್ಲೆಡೆಗಳಲ್ಲೂ ದೊರೆಯುವುದು.

ಪ್ರೊಪ್ರೈಯಿಟರ್ಸ್—
ದಿ ಡೋಂಗರೆ ಕಂಪೆನಿ,
(52—51) ಗಿರಿಗಾಂವ್, ಬೊಂಬಾಯಿ.

EMPIRE OF INDIA LIFE ASSURANCE CO., LTD.

ESTD. 1897.

TEN YEARS' PROGRESS.

	1925 Rs.	1935 Rs.
Income	45,50,127	73,28,467
New Assurances	78,07,000	1,47,57,880
Total Assets	2,46,08,120	4,50,03,372
Assurances in force	6,95,93,793	11,56,12,828

Form of proposal and other particulars will be sent on Application.

Head office:—
Empire of India Life Building,
BOMBAY.

52—12

Branch Office:—
152/3—Commercial Street,
BANGALRE.

ಪಂಡಿತ ಜವಾಹೀರಲಾಲ್ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣ ಪದಕವನ್ನು ಪಡೆದ,

ಒಂದೇ ಸಮನಾಗಿ ಮೂವತ್ತೈದು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ ತಾಜಾ ಮತ್ತು ಪೌಷ್ಟಿಕ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಮೆಡಲುಗಳನ್ನು ಪಡೆದು ಪರದೇಶದಲ್ಲಿ ಧಾರಾಳವಾಗಿ ಖರ್ಚಾಗುವ

ಶಕ್ತಿವರ್ಧಕ ಉತ್ತಮ ತರಗತಿಯ ಟಾನಿಕ್

ದ್ರಾಕ್ಷಾಮೃತ

ಶುದ್ಧ ವನಸ್ಪತಿ ರಸಾರ್ಕಗಳಿಂದ ಶಾಸ್ತ್ರೋಕ್ತವಾಗಿ ಸ್ವದೇಶೀ ಯಂತ್ರೋಪಕರಣದಿಂದ ತಯಾರಿಸಿದ ಮಧುರಾಮೃತ.

ಇದರ ಸೇವನೆಯಿಂದ ಉಷ್ಣ (ಗರಮಿ), ಧಾತುಸ್ರಾವ, ಸ್ವಪ್ನಾವಸ್ಥೆ, ಕೈಕಾಲು, ಕಣ್ಣೊಳಗೆ ಉರಿ, ಮಲಬದ್ಧ ಮುಂತಾದವು ಗುಣವಾಗುವದಲ್ಲದೆ ಜೀರ್ಣಶಕ್ತಿಯು ಹೆಚ್ಚಿ ದೇಹದಾರ್ಢ್ಯವುಂಟಾಗುವುದು. ಇದರಿಂದ ನಪುಂಸಕತ್ವವಿದ್ದಲ್ಲಿ ಅದು ಹೋಗಿ ವೀರ್ಯ ವೃದ್ಧಿಯೂಗುವದು. ಹೆಂಗಸರಿಗೂ, ಗಂಡಸರಿಗೂ ಇದು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಷ್ಣ (ಗರಮಿ) ರೋಗಗಳಿದ್ದರೆ ಅವೆಲ್ಲವೂ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯೂಗುವದು. ಈ ಔಷಧದ 3 ಬಾಟ್ಲಿಗಳ ಸೇವನೆಯಿಂದ ಪೂರ್ಣ ಗುಣ ಆಗುತ್ತದೆ. 1 ಬಾಟ್ಲಿಯನ್ನು ಸೇವಿಸುವದರಲ್ಲೇ ಇದರ ಗುಣ ಕಂಡು ಬರುವದು. ಪ್ರಮಾಣ:—ಬೆಳಗಿನಲ್ಲಿ ಒಂದು ತೊಲೆ ಮತ್ತು ಸಂಜೆಗೆ ಒಂದು ತೊಲೆ ತಕ್ಕೊಳ್ಳಬೇಕು.

ಬೆಲೆ—1 ಬಾಟ್ಲಿಗೆ ರೂ. 1—4-0, 3 ಬಾಟ್ಲಿಗೆ ರೂ. 3—8—0, 1 ಡಜನ್ ಬಾಟ್ಲಿಗಳಿಗೆ ರೂ. 12—0—0;

ಮ್ಯಾನೇಜರ್:—ದ್ರಾಕ್ಷಾಮೃತ ಡಿಪೊ ಪೋಸ್ಟ್ ನಿಪ್ಪಾಣಿ ಜಿಲ್ಲಾ (ಬೆಳಗಾವಿ.)

52—24 ಕೊಡಗಿನ ವಿಜಂಟರು—ನಾವೆಲ್ಟಿ ಸ್ಟೋರ್ಸ್, ಮಡಿಕೇರಿ
ಬಿ ಪುಟ್ಟಯ್ಯ ಶೆಟ್ಟಿ & ಸನ್ಸ್, ಸೋಮವಾರಪೇಟೆ.
ಭಕ್ತಾ ಬ್ರದರ್ಸ್, ಶಾಸರಗೋಡು.] ಎ. ಎನ್. ಹುಚ್ಚಯ್ಯ, ಮರ್ಚೆಂಟ್, ಗೋಣಿಕೊಪ್ಪಲು.

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಜೀವ ವಿಮೆ ಕಂಪೆನಿ ಲಿಮಿಟೆಡ್.

೧೮೭೪ರಲ್ಲಿ ಇಂಡಿಯಾದಲ್ಲಿ ಸ್ಥಾಪಿಸಲ್ಪಟ್ಟದ್ದು) (ಹೆಡ್ ಆಫೀಸು—ಬೊಂಬಾಯಿ.

1934ನೇ ಇಸವಿಯ ಕಂಪೆನಿಯ ಕೆಲಸದ ಫಲಿತಾಂಶ—

ಹೊಸ ಪಾಲಿಸಿಗಳ ಪ್ರೀಮಿಯಂ	....	ರೂ.	7,62,42,761
ವಾರ್ಷಿಕ ಉತ್ಪತ್ತಿ	....	ರೂ.	3,14,01,970
ಚಾಲ್ತಿಯಲ್ಲಿರುವ ಒಟ್ಟು ಪಾಲಿಸಿಗಳು	....	ರೂ.	54,20,38,518
ಕ್ಲೇಯಿಮ್ಸ್‌ಗಳಿಗೆ ಕೊಟ್ಟ ಒಟ್ಟು ಹಣ	....	ರೂ.	16,29,88,814
ಫಂಡ್ಸ್ ಹೆಚ್ಚಿದ್ದು	....	ರೂ.	15,53,88,843

ಈ ಮೇಲಿನ ಫಲಿತಾಂಶಗಳು 'ಓರಿಯಂಟಲ್' ಕಂಪೆನಿಯ ಸುಸಂಘಟನೆಯನ್ನೂ ಮತ್ತು ಪ್ರಸಿದ್ಧಿಯನ್ನೂ ವಿಷದಗೊಳಿಸುತ್ತವೆ.

ಈ ಪ್ರಸಿದ್ಧಿಗೊಂಡಿರುವ ಮತ್ತು ಅಭಿವೃದ್ಧಿಯಲ್ಲಿರುವ ಇಂಡಿಯನ್ ಜೀವ ವಿಮೆ ಕಂಪೆನಿಯಲ್ಲಿ ವಿಮೆ ಇಳಿಸಲು ಸಾವಕಾಶ ಮಾಡಬೇಡಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಮೇನೇಜರ್, ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಲಿಕೋಟೆ	ಕರಾಚಿ	ಮೊಂಬಾಸ	ರಂಗೂನು
ಅಹ್ಮದಾಬಾದು	ಕಲ್ಕತ್ತಾ	ಕೊಲಾಲಂಪೂರು	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಕೊಲಂಬೊ,	ಲಾಹೋರ್	ಪಾಟ್ನ	ಸಿಂಗಪುರ
ಅಲ್ಲಾಹಾಬಾದು	ಡಕ್ಕಾ	ಲಕ್ನೊ	ಪೂನ	ಸುಕ್ಕೂರು
ಅಂಬಾಲಾ	ಡೆಲ್ಲಿ	ಮದ್ರಾಸು	ರಾಯಪುರ	ತಿರುಚಿನಾಪಳ್ಳಿ
ಒಳ್ಳಾರಿ	ಗೌಹತಿ	ಮಂಡಲೆ	ರಾಜಶಾಹಿ	ತಿರುವೆಂಡ್ರಮ್
ಬರೇಲಿ	ಜಲಗಾಂ	ಮಡಿಕೇರಿ	ರಾಂಚಿ	ವಿಶಾಖಪಟ್ಣ
ಕೊಯಂಬತ್ತೂರು	ಗುಂಟೂರು	ಜಲ್‌ಪೇಗುರಿ	ಜಬ್ಬಲ್‌ಪುರ	ಮಧುರೆ & ಮೈಸೂರು

ಓರಿಯಂಟಲ್ ಬಿಲ್ಡಿಂಗ್ಸ್,
ಸೌತ್ ಪೇರೇಡ್, ಬೆಂಗಳೂರು, } 52—6

ಯಂ. ವಿ. ಮುತ್ತುಕೃಷ್ಣ ನಾಯುಡು,
(ಬ್ರಾಂಚ್ ಸಕ್ರೆಟರಿ.)

Printed & published by P. I. Belliappa, at 'Kodagu" Press, Mercara for "Kodagu" Ltd.